ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 6 ಫೆಬ್ರವರಿ 7, 1982 ಬೆಲೆ : 60 ಪೈಸೆ

ಸಂಪಾದಕೀಯ

ಕೇರಳ ವಿದ್ಯಮಾನ

ಅಧಿಕಾರಕ್ಕೆ ಅಂಟಿಕೊಳ್ಳಲು ಕಾಂಗ್ರೆಸ್ (ಐ) ಪಕ್ಷವು ಏನೆಲ್ಲಾ ಕುತಂತ್ರಗಳನ್ನು ಮಾಡಬಲ್ಲುದು ಮತ್ತು ಎಷ್ಟು ಕೆಳಮಟ್ಟಕ್ಕೆ ಇಳಿಯಬಲ್ಲುದು ಎಂಬುದಕ್ಕೆ ಕೇರಳ ರಾಜ್ಯದಲ್ಲಿನ ಬೆಳವಣಿಗೆಗಳೇ ಸಾಕ್ಷಿ. ಎಲ್ಲಾ ರಾಜಕೀಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ, ಸ್ಪಷ್ಟ ಬಹುಮತವಿಲ್ಲದಿರುವಾಗ ಕಾಂಗ್ರೆಸ್ ಮುಂದಾಳು ಕರುಣಾಕರನ್ ನೇತೃತ್ವದಲ್ಲಿ ಸರಕಾರ ರಚಿಸಲು ಕೇರಳದಲ್ಲಿ ರಾಜ್ಯಪಾಲೆ ಶ್ರೀಮತಿ ಜ್ಯೋತಿ ವೆಂಕಟಾಚಲಮ್ ಅನುಮತಿ ನೀಡಿದರು. ಇದೀಗ ವಿಧಾನಸಭಾ ಅಧಿವೇಶನವನ್ನು ಎದುರಿಸುತ್ತಿರುವ ಕೇರಳದ ಆಳುವ ಸಂಯುಕ್ತ ಪ್ರಜಾಪ್ರಭುತ್ವ ರಂಗ ಸರಕಾರವು ಆಶೆ, ಆಮಿಷಗಳನ್ನು ತೋರಿಸಿ ಕೆಲವು ಶಾಸಕರುಗಳನ್ನು ತಮ್ಮೆಡೆಗೆ ಬರುವಂತೆ ಮಾಡಿ ಅವಿಶ್ವಾಸ ನಿರ್ಣಯವನ್ನು ಎದುರಿಸಿತು.

ಕರುಣಾಕರನ್ ಸರಕಾರದ ವಿರುದ್ಧ ಮಂಡಿಸಲಾದ ಅವಿಶ್ವಾಸ ನಿರ್ಣಯಕ್ಕೆ ವಿಧಾನಸಭಾಧ್ಯಕ್ಷರೂ ಸೇರಿದಂತೆ 141 ಶಾಸಕರ ಬಲವಿರುವ ವಿಧಾನಸಭೆಯಲ್ಲಿ 70 ಮತಗಳ ಬೆಂಬಲ ದೊರೆತಿದ್ದರೆ. ಆಳುವ ರಂಗದ

[ಕಡೇ ಪುಟ ನೋಡಿ]

ಇ.ಎಂ.ಎಸ್. ಪುನರಾಯ್ಕೆ

ವಿಜಯವಾಡಾದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಸಮ್ಮೇಳನದಲ್ಲಿ ಕಾಂ. ಇ.ಎಂ.ಎಸ್. ನಂಬೂದಿರಿಪಾಡ್‌ರು ಪ್ರಧಾನಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಸಮ್ಮೇಳನದಲ್ಲಿ ಚುನಾಯಿತವಾದ ಕೇಂದ್ರಸಮಿತಿ ಸದಸ್ಯರುಗಳು ಇಂತಿವೆ :

1. ಕಾಮ್ರೇಡರುಗಳಾದ ಇ.ಎಂ.ಎಸ್. ನಂಬೂದಿರಿಪಾಡ್, 2. ಬಿ.ಟಿ. ರಣದಿವೆ, 3. ಪಿ. ಸುಂದರಯ್ಯ, 4. ಎಂ. ಬಸವಪುನ್ನಯ್ಯ, 5. ಪಿ.ರಾಮಮೂರ್ತಿ, 6. ಹರಿಕಿಷನ್‌ಸಿಂಗ್ ಸುರಜೀತ್, 7. ಜ್ಯೋತಿಬಸು, 8. ಪ್ರಮೋದ್‌ದಾಸ್‌ಗುಪ್ತ, 9. ಸಮರ್‌ಮುಖರ್ಜಿ, 10. ಕೃಷ್ಣಪಾದ್ ಘೋಷ್, 11. ಇ. ಕೆ. ನಾಯನಾರ್, 12. ಇ. ಬಾಲಾನಂದನ್, 13. ಎಂ. ಆರ್. ವೆಂಕಟ್ರಾಮನ್, 14. ಎಸ್. ವೈ. ಕೊಲ್ಹಾಟಕರ್, 15. ಎ. ಹನುಮಂತರಾವ್, 16. ಗೋದಾವರಿ ಪರುಳೇಕರ, 17. ಅಚಿಂತ್ ಭಟ್ಟಾಚಾರ್ಯ, 18. ನೃಪೇನ್ ಚಕ್ರವರ್ತಿ, 19. ದೇಶ್‌ರಾಜ್ ಚಡ್ಡಾ, 20. ಆರ್. ಉಮಾನಾಥ, 21. ನಲ್ಲಶಿವಂ, 22. ಸರೋಜ್ ಮುಖರ್ಜಿ, 23. ಬಿನೋಯ್ ಚೌಧರಿ, 24. ಮನೋರಂಜನ್ ರಾಯ್, 25. ಜಸ್‌ವಂತ್ ಸಿಂಗ್, 26. ಅಬ್ದುಲ್ಲಾ ರಸೂಲ್, 27. ಶಂಕರ್ ದಯಾಳ ತಿವಾರಿ, 28. ಅಹಲ್ಯಾ ರಂಗಣೇಕರ, 29. ಗಂಗಾಧರರಾವ್, 30. ಎಂ.ಕೆ. ಪಂಧೆ, 31. ಟಿ.ಕೆ. ರಾಮಕೃಷ್ಣ, 32. ಸುಶೀಲಾ ಗೋಪಾಲನ್, 33. ವಿ. ಎಸ್. ಅಚ್ಯುತಾನಂದನ್, 34. ಗಣೇಶ್‌ಶಂಕರ್ ವಿದ್ಯಾರ್ಥಿ, 35. ಚಂದೂಭಾಯಿ ಪಟೇಲ್, 36. ಜಿ ಎಸ್. ರಾಂಧ್ವಾ, 37. ಶಿವಾಜಿ ಪಾಟ್ನಾಯಕ್, 38. ನೃಸಿಂಗ್ ಚಕ್ರವರ್ತಿ, 39. ದಶರಥ ದೇವ್, 40. ಎನ್. ಪ್ರಸಾದ್‌ರಾವ್, 41. ರಾಮ್‌ದಾಸ್, 42. ನಟೇಶ್ ತಾಲ್ಲೂಕ್‌ದಾರ್

ಹೊಸದಾಗಿ ಆಯ್ಕೆಯಾದ ಕೇಂದ್ರಸಮಿತಿಯು ಒಂಬತ್ತು ಜನರ ಪೊಲಿಟ್‌ಬ್ಯೂರೋ ಸದಸ್ಯರನ್ನು ಚುನಾಯಿಸಿತು.

ಕಾಂ. ಇ.ಎಂ.ಎಸ್., ಬಿ.ಟಿ.ಆರ್., ಬಸವಪುನ್ನಯ್ಯ, ಪಿ. ರಾಮಮೂರ್ತಿ, ಸುರಜೀತ್, ಜ್ಯೋತಿಬಸು, ಪ್ರಮೋದ್ ದಾಸ್‌ಗುಪ್ತಾ, ಸಮರ್ ಮುಖರ್ಜಿ, ಇ. ಬಾಲಾನಂದನ್ ಇವರುಗಳು ಪಿ. ಬಿ. ಸದಸ್ಯರಾಗಿ ಆಯ್ಕೆಹೊಂದಿದ್ದಾರೆ.

ಸಂಘಟನಾ ಮುನ್ನಡೆ ಮತ್ತು ಹೆಚ್ಚುತ್ತಿರುವ ಜನಬೆಂಬಲದ ಪ್ರತೀಕ

ಪಕ್ಷದ ಯಶಸ್ವಿ 11ನೇ ಅಧಿವೇಶನ

—ಎಂ.ಕೆ.

1982 ಜನವರಿ 26ರಿಂದ 31ರ ತನಕ ವಿಜಯವಾಡದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೆ ಅಧಿವೇಶನವು ಎಲ್ಲಾ ದೃಷ್ಟಿಯಲ್ಲೂ ಪಕ್ಷದ ಮುನ್ನಡೆ, ಪ್ರಗತಿಯ ಪ್ರತೀಕವಾಗಿತ್ತು. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಮುನ್ನಡೆ, ಹೊಸ ಪ್ರದೇಶಗಳಿಗೆ ವಿಸ್ತರಣೆ, ಹೊಸ ಜನವಿಭಾಗಗಳ ಸಂಘಟನೆ, ವ್ಯಾಪಕವಾಗಿ ಬೆಳೆದುಬರುತ್ತಿರುವ ಹೋರಾಟಗಳ ಅನುಭವ, ರಾಷ್ಟ್ರೀಯವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ದಿನೇದಿನೇ ಹೆಚ್ಚುತ್ತಿರುವ ಗೌರವ-ಇವೆಲ್ಲವುಗಳ ಪ್ರತಿಫಲನವಾಗಿ ಹನ್ನೊಂದನೆ ಅಧಿವೇಶನವು ನಡೆಯಿತು.

ಜನವರಿ 31ರಂದು ಕೃಷ್ಣಾ ನದಿ ದಡದಲ್ಲಿ ನಡೆದ ಭಾರಿ ಬೃಹತ್ ಪ್ರಮಾಣದ ಬಹಿರಂಗ ಸಭೆಯು ಕೇವಲ ಆಂಧ್ರಪ್ರದೇಶದಲ್ಲಿ ಮಾತ್ರವೇ ಅಲ್ಲ ಇಡೀ ರಾಷ್ಟ್ರದಲ್ಲಿ ಪಕ್ಷಕ್ಕೆ ಹೆಚ್ಚುತ್ತಿರುವ ಜನಬೆಂಬಲಕ್ಕೆ ಸಾಕ್ಷಿಯಾಗಿತ್ತು. ಸಂಘಟಕರೂ ಸೇರಿದಂತೆ ಎಲ್ಲರ ನಿರೀಕ್ಷೆಗೂ ಮೀರಿ ಸೇರಿದ್ದ ಜನಸಂಖ್ಯೆ ಸುಮಾರು ಆರು ಲಕ್ಷ ಆಗಬಹುದು. ಕೃಷ್ಣಾ ನದಿ ದಡದ ಮರಳು ತುಂಬಿದ ವಿಶಾಲ ಪ್ರದೇಶದಲ್ಲಿ ರಾರಾಜಿಸುತ್ತಿದ್ದ ಕೆಂಬಾವುಟಗಳೊಂದಿಗೆ ಸೇರಿದ್ದ ಜನಸಾಗರವು ಅತ್ಯಂತ ಸ್ಫೂರ್ತಿದಾಯಕವಾಗಿತ್ತು. ಕಣ್ಣಿಗೆ ರಮ್ಯವಾದ ನೋಟವನ್ನು ಒದಗಿಸುತ್ತಿತ್ತು. ಜನಸಾಗರವನ್ನು ನಿಯಂತ್ರಿಸಲು ಮತ್ತು ಸಭೆಯನ್ನು ವ್ಯವಸ್ಥಿತವಾಗಿ ನಡೆಸಲು ಮೂರುಸಹಸ್ರ ಕೆಂಪು ಸಮವಸ್ತ್ರ ಧರಿಸಿದ ಸ್ವಯಂಸೇವಕರು ಅತ್ಯಂತ ಸಂಯಮ ಮತ್ತು ಶಿಸ್ತಿನಿಂದ ಶ್ರಮಿಸಿದರು.

30ರಂದು ಸಂಜೆಯಿಂದಲೇ ಆಂಧ್ರಪ್ರದೇಶದ ನಾನಾ ಕಡೆಯಿಂದ ರೈತರು, ಕಾರ್ಮಿಕರು, ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವಜನತೆ ಮತ್ತು ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ವಿಜಯವಾಡ ನಗರವನ್ನು ಬಂದು ಸೇರುವುದಕ್ಕೆ ಪ್ರಾರಂಭವಾಗಿತ್ತು. ಅಧಿವೇಶನವು ಮುಗಿಯುತ್ತಿದ್ದಂತೆಯೇ 30ರಂದು ಸಂಜೆ ಸುಮಾರು 3000 ಸ್ವಯಂಸೇವಕರಿಂದ ಪಥ ಸಂಚಲನ ನಡೆದು ಹೊಸತಾಗಿ ಆಯ್ಕೆಯಾಗಿರುವ ಕೇಂದ್ರಸಮಿತಿ ಸದಸ್ಯರಿಗೂ, ಪ್ರತಿನಿಧಿಗಳಿಗೂ ಕೆಂಪು ವಂದನೆಗಳನ್ನು ಸಲ್ಲಿಸಲಾಯಿತು. ಸುಮಾರು ಒಂದು ಸಹಸ್ರ ಸಂಖ್ಯೆಯಲ್ಲಿದ್ದ ಕೆಂಪು ಉಡುಪು ಧರಿಸಿದ ಮಹಿಳಾ ಸ್ವಯಂಸೇವಕಿಯರು ಎಲ್ಲರ ಗಮನವನ್ನು ಸೆಳೆದರು. ಕೆಂಪು ಬಾವುಟ ಮತ್ತು ತೋರಣಗಳಿಂದಲೂ, ಸ್ವಾಗತ ಕಮಾನುಗಳಿಂದಲೂ ಅಲಂಕೃತವಾಗಿದ್ದ ವಿಜಯವಾಡ ನಗರದಲ್ಲಿ 30ರಂದು ಸಂಜೆ ಸ್ವಯಂಸೇವಕ ಮತ್ತು ಸೇವಕಿಯರು ಪಥ ಸಂಚಲನ ನಡೆಸಿ ಹೊಸ ಮೆರಗುಕೊಟ್ಟರು. 31ರಂದು ಬೆಳಗ್ಗಿನಿಂದಲೇ ವಿಜಯವಾಡ ನಗರವಿಡೀ ಜನರ ಪ್ರವಾಹದಿಂದ ತುಂಬಿತ್ತು. ಕೆಂಬಾವುಟಗಳು, ತಮಟೆಗಳ ನಿನಾದ ಮತ್ತು ಕ್ರಾಂತಿಕಾರಿ ಹಾಡುಗಳು ಮತ್ತು ಘೋಷಣೆಗಳೊಂದಿಗೆ ಜನರು ಗುಂಪುಗುಂಪಾಗಿ ಮತ್ತು ಮೆರವಣಿಗೆಯಲ್ಲಿ ಹೋಗುತ್ತಿದ್ದುದು ನಗರವನ್ನು ರೈತಕಾರ್ಮಿಕರು ಸ್ವಾಧೀನಪಡಿಸಿಕೊಂಡಂತೆ ಕಾಣಿಸುತ್ತಿತ್ತು.

31ರಂದು ಸಂಜೆ 5ಕ್ಕೆ ಸರಿಯಾಗಿ ಬಹಿರಂಗ ಸಭೆ ಪ್ರಾರಂಭವಾಗಿತ್ತು. ಕಾಂ. ಪಿ. ಸುಂದರಯ್ಯ ಅಧ್ಯಕ್ಷತೆ ವಹಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್, ಕಾಂ. ಬಿ. ಟಿ. ರಣದಿವೆ, ಕಾಂ. ಜ್ಯೋತಿಬಸು, ಕಾಂ. ನೃಪೇನ್‌ಚಕ್ರವರ್ತಿ, ಕಾಂ. ಗೋದಾವರಿ ಪರುಳೇಕರ್, ಕಾಂ. ಎಮ್. ಬಸವಪುನ್ನಯ್ಯ ಮೊದಲಾದವರು ಭಾಷಣ ಮಾಡಿದರು. 5 ದಿನಗಳ ಅಧಿವೇಶನದಲ್ಲಿ ಮಾಡಿದ ಚರ್ಚೆ ಮತ್ತು ತೆಗೆದುಕೊಂಡ ರಾಜಕೀಯ ನಿರ್ಣಯಗಳ ಬಗ್ಗೆ ಭಾಷಣಕಾರರೆಲ್ಲರೂ ವಿವರಣೆ ನೀಡಿದರು. ಹನ್ನೊಂದನೆ ಅಧಿವೇಶನ ಮುಗಿಯುವ ಹೊತ್ತಿಗೆ ಪಕ್ಷವು ಒಡೆದು ಹೋಗುವುದೆಂದು ಲೆಕ್ಕಾಚಾರ ಹಾಕಿ, ಊಹಾಪೋಹಗಳನ್ನು ಮಾಡಿ, ಸುಳ್ಳು ಪ್ರಚಾರ ಮಾಡಿದವರನ್ನು ವಿಜಯವಾಡದಲ್ಲಿ ಯಶಸ್ವಿಯಾಗಿ ಜರುಗಿದ ಅಧಿವೇಶನವು ಸುಳ್ಳಾಗಿಸಿದೆ ಎಂದೂ, ಪಕ್ಷವು ಹಿಂದಿಗಿಂತಲೂ ಹೆಚ್ಚಿನ ಐಕ್ಯತೆಯನ್ನು ಸಾಧಿಸಿದೆಯೆಂದೂ ಪ್ರಧಾನಕಾರ್ಯದರ್ಶಿಯವರು ಸಾರಿದರು. ಜೀವಂತವಾಗಿರುವ ಸಂಘಟನೆಯಲ್ಲಿ ಅಭಿಪ್ರಾಯ ಬೇಧಗಳು ಬರುವುದು ಸ್ವಾಭಾವಿಕ; ಆದರೆ ಅದನ್ನು ಮಾರ್ಕ್ಸ್‌ವಾದ–ಲೆನಿನ್‌ವಾದದ ಆಧಾರದಿಂದಲೂ, ಕೇಂದ್ರೀಕೃತ ಪ್ರಜಾಪ್ರಭುತ್ವ ನಿಯಮಗಳನ್ನು ಅನುಸರಿಸುವುದರ ಮೂಲಕವೂ ಪರಿಹರಿಸುವುದೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಧಾನ ಎಂದು ಪ್ರಧಾನಕಾರ್ಯದರ್ಶಿಗಳು ಹೇಳಿದರು. ಸರ್ವಾಧಿಕಾರ ಶಕ್ತಿಯನ್ನು ಹಿಮ್ಮೆಟ್ಟಿಸಲೂ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಸಾಧಿಸಲೂ, ಪಕ್ಷದ ಸಂಘಟನೆಯನ್ನು ಬಲಪಡಿಸಿ ದುಡಿಯುವ ಜನಕೋಟಿಯ, ಶೋಷಿತ ಜನತೆಯ ಮತ್ತು ಜನಸಾಮಾನ್ಯರ ಹೋರಾಟಗಳ ಪ್ರವಾಹಗಳನ್ನು ಬೆಳೆಸಲು ಭಾಷಣಕಾರರೆಲ್ಲರೂ ಕರೆ ಇತ್ತರು. ನಿರೀಕ್ಷೆಗೂ ಮೀರಿ ಜನಸೇರಿದ್ದಕ್ಕೆ ಮತ್ತು ಅಧಿವೇಶನವನ್ನು ಯಶಸ್ವಿಯಾಗಿಸಲು ತನು, ಮನ, ಧನ ಸಹಾಯ ನೀಡಿದ್ದಕ್ಕೆ ರೈತ, ಕಾರ್ಮಿಕರನ್ನು, ಎಲ್ಲ ಜನತೆಗೆ ಕಾಂ. ಸುಂದರಯ್ಯ ಕೃತಜ್ಞತೆ ಸಲ್ಲಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಮುಂದಾಳುಗಳೆಲ್ಲರೂ "ಕಳೆದ ನಲ್ವತ್ತು ವರ್ಷಗಳಲ್ಲಿ ಆಂಧ್ರ ರಾಜ್ಯದಲ್ಲಿ ಕಂಡಿರದಷ್ಟು ಬೃಹತ್ತಾದ ಮತ್ತು ಬೇರಾವುದೇ ರಾಜಕೀಯ ಪಕ್ಷಗಳು ಸಂಘಟಿಸಲಾರದಷ್ಟು ದೊಡ್ಡದಾದ ಬೃಹತ್ ಬಹಿರಂಗ ಸಭೆ" ಸೇರಿರುವುದು ಆಂಧ್ರಪ್ರದೇಶದಲ್ಲಿ ಪಕ್ಷವು ತೀವ್ರಗತಿಯಿಂದ ಬೆಳೆ

[ಕಡೇ ಪುಟ ನೋಡಿ]

ಸಂಕ್ಷಿಪ್ತ ಸಮಾಚಾರಗಳು

ಮೈಸೂರು

24-1-82ರಂದು ಭಾನುವಾರ ಮೈಸೂರಿನ ಗಾಂಧೀನಗರದಲ್ಲಿರುವ ಜೈಹಿಂದ್ ಯುವಕರ ಸಂಘದ ಸರ್ವ ಸದಸ್ಯರ ಸಭೆಯು ಮಂಜುನಾಥ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಜೈಹಿಂದ್ ಯುವಕರ ಸಂಘವನ್ನು ವಿಸರ್ಜಿಸಿ, ಡಿ. ವೈ. ಎಫ್. ಐ.ನಲ್ಲಿ ವಿಲೀನಗೊಳಿಸಿ ಡಿ. ವೈ. ಎಫ್. ಐ.ನ ಗಾಂಧೀನಗರ ಸಮಿತಿಯನ್ನು ರಚಿಸಲಾಯಿತು.

ಸಭೆಯನ್ನುದ್ದೇಶಿಸಿ ಡಿ. ವೈ. ಎಫ್. ಐ.ನ ಮೈಸೂರು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಜಯರಾಂ, ರಾಜ್ಯಸಮಿತಿ ಸದಸ್ಯ ಮೋಹನ್‌ಕುಮಾರ್, ಜಿ.ರಾಜೇಂದ್ರ, ಕೆ. ಕೃಷ್ಣ ಮೊದಲಾದವರು ಮಾತನಾಡಿ ಡಿ. ವೈ.ಎಫ್.ಐ.ನ ಧ್ಯೇಯೋದ್ದೇಶಗಳು, ಕಾರ್ಯಕ್ರಮಗಳನ್ನು ವಿವರಿಸಿದರು.

ಗಾಂಧೀನಗರ ಸ್ಥಳೀಯ ಸಮಿತಿಗೆ ಕೆಳಕಂಡವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಮಂಜುನಾಥಸ್ವಾಮಿ, ಉಪಾಧ್ಯಕ್ಷರಾಗಿ ಮುಟ್ಟಿಲಿಂಗು, ಪ್ರಧಾನ ಕಾರ್ಯದರ್ಶಿಯಾಗಿ ಎಂ. ಕೃಷ್ಣ, ಜಂಟಿಕಾರ್ಯದರ್ಶಿಯಾಗಿ ಶಿವಶಂಕರ, ಖಜಾಂಚಿಯಾಗಿ ಎ. ಆನಂದ ಕುಮಾರ್ ಮತ್ತು ಹತ್ತು ಜನರ ಸಮಿತಿಯನ್ನು ಆಯ್ಕೆಮಾಡಲಾಗಿದೆ.

ಗಾಂಧೀನಗರ ಪ್ರದೇಶದಲ್ಲಿ ಆಟದ ಮೈದಾನವೊಂದನ್ನು ನಿರ್ಮಿಸಬೇಕೆಂಬ, ಪ್ರದೇಶಕ್ಕೆ ನೀರು ಮತ್ತು ದೀಪದ ವ್ಯವಸ್ಥೆ ಸಮರ್ಪಕವಾಗಿ ಆಗಬೇಕೆಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಸುಳ್ಯ

ಡಿ. ವೈ. ಎಫ್. ಐ. ರಾಜ್ಯಸಮಿತಿಯು ಕರೆಯಂತೆ ಸುಳ್ಯ ತಾಲ್ಲೂಕಿನ ಡಿ.ವೈ.ಎಫ್.ಐ.ನ ಸುಮಾರು 200 ಕಾರ್ಯಕರ್ತರು ಸುಳ್ಯ ತಾಲ್ಲೂಕು ಆಫೀಸಿನೆದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಸ್ವೈಫಂಡರೀ ಪದವೀಧರರನ್ನು ಖಾಯಂಗೊಳಿಸಬೇಕೆಂದು, ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆಯನ್ನು ನೀಡಬೇಕೆಂದು ಒತ್ತಾಯಿಸುವ ಬೇಡಿಕೆಗಳುಳ್ಳ ಮನವಿಯನ್ನು ತಹಸೀಲ್ದಾರರ ಮೂಲಕ ಮಹವಿ ಸಲ್ಲಿಸಲಾಯಿತು.

ಧರಣಿ ಸತ್ಯಾಗ್ರಹಕ್ಕೆ ಮೊದಲು ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಮೆರವಣಿಗೆ ಮತ್ತು ಸತ್ಯಾಗ್ರಹದ ನೇತೃತ್ವವನ್ನು ಸುಳ್ಯ ತಾಲ್ಲೂಕು ಡಿ.ವೈ.ಎಫ್.ಐ. ಅಧ್ಯಕ್ಷ ಕಾಂ. ಪಿ. ಕೆ. ಮೂಸಾ. ಉಪಾಧ್ಯಕ್ಷ ಚಂದ್ರಶೇಖರ ಮತ್ತು ಕಾರ್ಯದರ್ಶಿ ಕಾಂ. ಎ. ಜಯರಾಮ್ ವಹಿಸಿದ್ದರು.

ಮಂಗಳೂರು

ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಂಗಳೂರು ಶಾಖೆಯ ಆಶ್ರಯದಲ್ಲಿ 17-1-82ರಂದು ಸಭೆಯೊಂದು ನಡೆಯಿತು. ದಲಿತರ ಕುರಿತು ಮಂಗಳೂರು ನಗರ ಪಾಲಿಕೆಯ 'ಜಡ ನೀತಿ'ಯ ಬಗ್ಗೆ ಸಾರ್ವಜನಿಕರ ಗಮನ ಸೆಳೆಯಲು ಈ ಸಭೆಯನ್ನು ವ್ಯವಸ್ಥೆಗೊಳಿಸಲಾಗಿತ್ತು. ಜಿಲ್ಲಾ ಸಮಿತಿಯ ಸಂಚಾಲಕ ಕಾಂ. ಬಿ. ರಾಮಕೃಷ್ಣ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಚಿಕ್ಕಮಂಗಳೂರು ದ.ಸಂ.ಸ. ಯ ಕಾಂ. ಎಚ್. ಸಿ. ರಾಜಣ್ಣ, ಮಂಗಳೂರಿನ ಪಿ. ಕಮಲಾಕ್ಷ, ರಾಜ್ಯಸಮಿತಿಯ ಸಂಚಾಲಕ ಗಂಗಯ್ಯ ಇವರು ಭಾಷಣಕಾರರಾಗಿ ಆಗಮಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ. ರಾಮಕೃಷ್ಣ ಮಾತನಾಡುತ್ತಾ ಅತಿ ಹೀನ ಪರಿಸ್ಥಿತಿಯಲ್ಲಿರುವ ದಲಿತರು ಶಾಶ್ವತ ಹಕ್ಕುಗಳನ್ನು ಮರೆತು ಒಂದು ಶಕ್ತಿಯಾಗಿ ಎದ್ದು ನಿಲ್ಲಬೇಕೆಂದು ಕರೆ ನೀಡಿದರು.

ಮಹಾನಗರ ಪಾಲಿಕೆಯಲ್ಲಿ ಶೇ.18 ರಷ್ಟು ಕಾದಿರಿಸಿದ ಹಣದಿಂದ ಪ್ರತಿಯೊಬ್ಬ ಪೌರ ಕಾರ್ಮಿಕನಿಗೂ ಮನೆ ಒದಗಿಸಬೇಕೆಂದು, ವಿದ್ಯುತ್‌ದೀಪ ಮತ್ತು ಕೊಳಾಯಿ (ನಳ್ಳಿ) ನೀರಿನ ಸೌಕರ್ಯ ಒದಗಿಸಬೇಕು. ಕಾಲನಿಗಳಲ್ಲಿ ನರ್ಸರಿ-ಶಾಲೆಗಳ ಸೌಲಭ್ಯ ಕಲ್ಪಿಸಬೇಕು ಮತ್ತು ವಸತಿಹೀನರಿಗೆ ವಸತಿ ನಿವೇಶನಗಳನ್ನು ಕೊಡಬೇಕು ಎಂದು ಒತ್ತಾಯಿಸುವ ಠರಾವುಗಳನ್ನು ಮಂಜೂರು ಮಾಡಲಾಯಿತು.

ಮಂಗಳೂರಿನ ಊರ್ವ ಮೈದಾನದಲ್ಲಿ ಕಿಕ್ಕಿರಿದ ಸಭೆಯು ದಲಿತರಿಗೆ ಹೊಸಸ್ಫೂರ್ತಿಯನ್ನು. ಹೋರಾಟಕ್ಕೆ ಅಣಿಗೊಳಿಸುವುದರಲ್ಲಿ ಹೊಸ ಹಂತವನ್ನು ತಲುಪಿದೆ. ಕೊನೆಯಲ್ಲಿ ಸಹ ಸಂಚಾಲಕ ಕಾಂ. ಜಿ. ಎಸ್. ಶೇಖರ ವಂದನಾರ್ಪಣೆ ಮಾಡಿದರು.

ಕೋಣಿ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕೋಣಿಗ್ರಾಮದ ಮಹಿಳೆಯರ ಸಭೆಯು ದಿನಾಂಕ 24-1-82 ರಂದು ಕೋಣಿಗ್ರಾಮ ಪಂಚಾಯತ್ ಆಫೀಸಿನ ವಠಾರದಲ್ಲಿ ಜರುಗಿತು; ಸಭೆಗೆ ಮುಖ್ಯ ಅತಿಥಿಗಳಾಗಿ ತಾಲ್ಲೂಕು ಸಮಿತಿಯ ಸದಸ್ಯೆಯರಾದ ಡಾ॥ ಕೆ. ಸುಶೀಲ, ಶ್ರೀಮತಿ ಕೋಡಿ, ಶಕುಂತಳಾ ಮತ್ತು ಗುಲಾಬಿ ಕೋಟೇಶ್ವರ ಇವರುಗಳು ಭಾಗವಹಿಸಿದ್ದರು.

ಡಾ॥ ಕೆ. ಸುಶೀಲ ಸಭೆಯನ್ನುದ್ದೇಶಿಸಿ ಮಾತನಾಡಿ, ಮಹಿಳೆಯರು ಸಂಘಟಿತರಾಗಿ ಸಾಮಾಜಿಕ ಪಿಡುಗಾದ ಮೂಢ ನಂಬಿಕೆ, ವರದಕ್ಷಿಣೆ ಮತ್ತು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರದ ವಿರುದ್ಧ ಹೋರಾಟ ಮಾಡಬೇಕಾದ ಅಗತ್ಯತೆಯ ಕುರಿತು ಮಾತನಾಡಿದರು.

ಕೆ. ಸುಲೋಚನ, ಕೆ. ಸುಜಾತ, ಲಲಿತ, ಜತ್ತು ಇವರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

ಶಿಡ್ಲಘಟ್ಟ

ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ 25-1-82ರಂದು ಡಿ.ವೈ.ಎಫ್. ಐ. ಸ್ಥಳೀಯ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಎಸ್. ಆರ್. ಶ್ರೀನಿವಾಸ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೋಹನ್‌ಕುಮಾರ್, ಎಸ್. ಶಿವರಾಂ, ಸತ್ಯನಾರಾಯಣ, ಟಿ. ಸುಬ್ಬಣ್ಣ, ದೊರೆಸ್ವಾಮಿ, ಮಣಿ ಮತ್ತು ನರೀಂದ್ರ ಮೊದಲಾದವರು ಆಗಮಿಸಿದ್ದರು. ಸ್ಥಳೀಯ ಸಮಿತಿ ಕಾರ್ಯದರ್ಶಿ ಎನ್. ಮುನಿಯಪ್ಪ ಸ್ವಾಗತ ಕೋರಿದರು. ಶಾಮಣ್ಣ ವಂದಿಸಿದರು.

ಬಹಿರಂಗ ಸಭೆಗೆ ಮುನ್ನ ಯುವ ಜನರ ಬೃಹತ್ ಮೆರವಣಿಗೆ ನಡೆಸಿ ಯುವಜನರ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ಕೊರಂಕರಪಾಡಿ

31-1-82ರಂದು ಉಡುಪಿ ತಾಲ್ಲೂಕಿನ ಕೊರಂಕರಪಾಡಿಯಲ್ಲಿ ಉಡುಪಿ ತಾಲ್ಲೂಕು ನೈಗೆ ಮಜೂರರ ವಾರ್ಷಿಕ ಮಹಾಸಭೆ ನಡೆಯಿತು.

ಆರಂಭದಲ್ಲಿ ಕಾರ್ಯದರ್ಶಿ ಫೆಡ್ರಿಕ್ ಸೋನ್ಸ್‌ರು ವಾರ್ಷಿಕ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು. ನಂತರ ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಹೆರ್ಬರ್ಟ್ ಸೋನ್ಸ್, ಉಪಾಧ್ಯಕ್ಷರಾಗಿ ಕಾಂ. ಡೇವಿಡ್ ಕರ್ಕಡ, ಕಾರ್ಯದರ್ಶಿಯಾಗಿ ಗುರುರಾಜ ಸೆಟ್ಟಿಗಾರ, ಸಹಕಾರ್ಯದರ್ಶಿಯಾಗಿ ಕೆ. ಸಂಜೀವ ಸೆಟ್ಟಿಗಾರ, ಖಜಾಂಚಿಯಾಗಿ ವಿಶ್ವನಾಥ ಸೇರಿಗಾರ ಮತ್ತು 6 ಜನರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

ಗಂಗಾವತಿ.

20-1-82ರಂದು ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಜಿಲ್ಲಾ ಪ್ರಾಂತ ರೈತ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಜಿಲ್ಲೆಯ ಪ್ರತಿನಿಧಿಗಳು ಸೇರಿದ್ದ ಈ ಸಭೆಯಲ್ಲಿ ಒಂಬತ್ತು ಜನರ ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

ಸಭೆಯಲ್ಲಿ ಸರಕಾರದ ರೈತ-ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ. ಹಳ್ಳಿಗಳಲ್ಲಿ ಸಾಲವಸೂಲಿಯ ಹೆಸರಿನಲ್ಲಿ ರೈತರ ಮನೆಗಳನ್ನು ಜಪ್ತಿ ಮಾಡುವದನ್ನು ನಿಲ್ಲಿಸುವಂತೆ ಸರಕಾರವನ್ನು ಒತ್ತಾಯಿಸಲಾಯಿತು. ಜಿಲ್ಲೆಯಲ್ಲಿ ರೈತ-ಕೃಷಿ ಕಾರ್ಮಿಕರನ್ನು ಸಂಘಟಿಸುವ ಉದ್ದೇಶದಿಂದ ತಾಲ್ಲೂಕುವಾರು ಸಮಾವೇಶ ನಡೆಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

22-2-82ರಂದು ಗಂಗಾವತಿ ತಾಲ್ಲೂಕು ಸಮಾವೇಶವನ್ನು ಗಂಗಾವತಿಯಲ್ಲಿ ನಡೆಸಬೇಕೆಂದು ನಿರ್ಧರಿಸಲಾಯಿತು.

ಕೋಲಾರದ ಮುಳಬಾಗಿಲಿನಲ್ಲಿ ಮಾರ್ಚಿ 11 ರಿಂದ 14ರವರೆಗೆ ನಡೆಯಲಿರುವ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಮತ್ತು ಜಿಲ್ಲೆಯಲ್ಲಿ ಸದಸ್ಯತ್ವವನ್ನು ತೀವ್ರಗೊಳಿಸಲು ತೀರ್ಮಾನಿಸಲಾಯಿತು.

ತುಮಕೂರು

30-1-82ರಂದು ತುಮಕೂರು ಜಿಲ್ಲಾ ಸೆಕೆಂಡರಿ ಶಾಲಾ ನೌಕರರ ಸಮಾವೇಶವು ತುಮಕೂರಿನ ಸಾವಿತ್ರಮ್ಮನವರ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ನಡೆಯಿತು.

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಪ್ರತಿನಿಧಿಗಳನ್ನುದ್ದೇಶಿಸಿ ಎಂ. ಎಲ್. ಸಿ. ಬಸವರಾಜಹೊರಟ್ಟಿ ಮಾತನಾಡಿ, ಶಿಕ್ಷಕರು ಸಂಘಟಿತರಾಗಿ ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬೇಕೆಂದು ನುಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೆಕೆಂಡರಿ ಶಾಲಾ ನೌಕರರ ಸಂಘದ ಪ್ರಧಾನಕಾರ್ಯದರ್ಶಿ ಕೆ. ವಿ. ರಾಯಚೂರ ವಹಿಸಿದ್ದರು.

ಕೊನೆಯಲ್ಲಿ ಸಿ. ಯತಿರಾಜು ಅವರನ್ನು ಜಿಲ್ಲೆಯ ಸಂಘಟನಾ ಕಾರ್ಯದರ್ಶಿಯನ್ನಾಗಿ ಆಯ್ಕೆಮಾಡಲಾಯಿತು. ತುಮಕೂರು ತಾಲ್ಲೂಕು ಸಮಿತಿಗೆ ಅಧ್ಯಕ್ಷರಾಗಿ ಚಂದ್ರಶೇಖರಯ್ಯ, ಉಪಾಧ್ಯಕ್ಷರಾಗಿ ಸಿದ್ಧಲಿಂಗಸ್ವಾಮಿ ಇವರುಗಳನ್ನು ಆಯ್ಕೆ ಮಾಡಲಾಯಿತು.

ಸುಳ್ಯ

ದಿನಾಂಕ 25-1-82ರಂದು ಸುಳ್ಯದಲ್ಲಿ ಎಸ್. ಎಫ್. ಐ.ನ ಬೆಳ್ಳಾರೆ ಘಟಕದ ಸಭೆಯು ತಾಲ್ಲೂಕು ಬೋರ್ಡ್ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಎಸ್. ಎಫ್. ಐ.ನ ದ. ಕ. ಜಿಲ್ಲಾ ಉಪಾಧ್ಯಕ್ಷ ರತ್ನಾಕರನ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್. ಎಫ್. ಐ. ದ. ಕ. ಜಿಲ್ಲಾ ಸಹಕಾರ್ಯದರ್ಶಿ ಎಂ. ಜಗನ್ನಾಥ ರೈ ಮತ್ತು ಸುಳ್ಯ ತಾಲ್ಲೂಕು ಸಮಿತಿ ಕಾರ್ಯದರ್ಶಿ ಎಸ್. ಎ. ಮುಹಮ್ಮದ್ ಕುಂಞ ಆಗಮಿಸಿದ್ದರು.

ಸಭೆಯನ್ನುದ್ದೇಶಿಸಿ ಬೆಳ್ಳಾರೆ ಸರಕಾರಿ ಕಿರಿಯ ಕಾಲೇಜಿನ ರಾಜ್ಯಶಾಸ್ತ್ರದ ಉಪನ್ಯಾಸಕ ಬಾಲಕೃಷ್ಣ ಕೊಡುಂಕೇರಿ ಮತ್ತು ಕೆ. ಹೊನ್ನಪ್ಪ ಗೌಡ ಸಾಂದರ್ಭಿಕ ಭಾಷಣ ಮಾಡಿದರು.

ಎಸ್. ಎಫ್. ಐ. ನ ಸ್ಥಾಪನಾ ದಿನಾಚರಣೆಯ ಅಂಗವಾಗಿ ನಡೆದ ಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸುಳ್ಯದ ನ್ಯಾಯವಾದಿ ಎಸ್. ಎನ್. ಭಟ್ ಬಹುಮಾನ ವಿತರಣೆ ಮಾಡಿದರು.

ಆರಂಭದಲ್ಲಿ ಬೆಳ್ಳಾರೆ ಘಟಕದ ಕಾರ್ಯದರ್ಶಿ ಕೆ. ವಸಂತ ಸ್ವಾಗತಿಸಿದರು. ಕೊನೆಯಲ್ಲಿ ಶಾಂತಪ್ಪ ರೈ ವಂದಿಸಿದರು.

ಜನವರಿ 25ರಂದೇ ಸುಳ್ಯದ ರೋಟರಿ ಹಾಲ್‌ನಲ್ಲಿ ತಾಲ್ಲೂಕಿನ ಎಸ್. ಎಫ್. ಐ.ನ ಸರ್ವಸದಸ್ಯರ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ರತ್ನಾಕರ, ಜಗನ್ನಾಥ ರೈ ಮೊದಲಾದವರು ಮಾತನಾಡಿದರು.

ಕೊನೆಯಲ್ಲಿ ಹೊಸ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು. ತಾಲ್ಲೂಕು ಸಮಿತಿಯ ಅಧ್ಯಕ್ಷರಾಗಿ ಕೆ. ವಸಂತ, ಉಪಾಧ್ಯಕ್ಷರಾಗಿ ಪಿ. ಸೀತಾಲಕ್ಷ್ಮಿ, ಕಾರ್ಯದರ್ಶಿಯಾಗಿ ಮುಹಮ್ಮದ್ ಕುಂಞ, ಜೊತೆಕಾರ್ಯದರ್ಶಿಯಾಗಿ ಕೆ. ಕೆ. ನೀಲಮ್ಮ, ಖಜಾಂಚಿಯಾಗಿ ಬಿ. ಕೆ. ಕೃಷ್ಣ ಆಯ್ಕೆಯಾಗಿದ್ದಾರೆ. ಜೊತೆಗ 7 ಜನರಿರುವ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

o

11ನೇ ಸಮ್ಮೇಳನಕ್ಕೆ

ಜಗತ್ತಿನ ಸೋದರ ಪಕ್ಷಗಳಿಂದ ಶುಭಾಶಯಗಳು

ವಿಜಯವಾಡಾದಲ್ಲಿ ಸಿ. ಪಿ. ಐ. (ಎಂ)ನ ಹನ್ನೊಂದನೇ ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ಜಗತ್ತಿನ ಅನೇಕ ಸೋದರ ಕಮ್ಯುನಿಸ್ಟ್ ಪಕ್ಷಗಳು ಶುಭಾಶಯ ಸಂದೇಶ ಕಳಿಸಿ ಸಮ್ಮೇಳನಕ್ಕೆ ಯಶಸ್ಸು ಕೋರಿವೆ. ಕೆಲವನ್ನು ಸಂಕ್ಷಿಪ್ತವಾಗಿ ಪ್ರಕಟಿಸುತ್ತಿದ್ದೇವೆ.

1. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ತನ್ನ 14 ಜನವರಿ 1982ರ ಸಂದೇಶದಲ್ಲಿ "ಭಾರತದ ಮಹಾನ್ ಜನತೆ ಅಭಿವೃದ್ಧಿ ಹಾಗೂ ಸಾಮಾಜಿಕ ಪ್ರಗತಿಗಾಗಿಯೂ, ಏಷ್ಯಾದ ಹಾಗೂ ಜಗತ್ತಿನ ಜನತೆಗಳ ಜಾಗತಿಕ ಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿಯೂ ನಡೆಸಿರುವ ಹೋರಾಟಗಳಿಗೆ ನಿಮ್ಮ ಪಕ್ಷ ಮಹಾನ್ ಕೊಡುಗೆ ನೀಡಿದೆ. ವಿಯಟ್ನಾಮೀ ಜನತೆ ಈ ಹಿಂದೆ ರಾಷ್ಟ್ರೀಯ ಮುಕ್ತಿಗಾಗಿ ಅಮೇರಿಕಾವನ್ನು ಎದುರಿಸುತ್ತಿದ್ದಾಗ ಹಾಗೂ ಈಗ ಸಮಾಜವಾದೀ ರಚನೆ ಮತ್ತು ಪಿತೃಭೂಮಿಯ ರಕ್ಷಣೆಯಲ್ಲಿ ಸಿ. ಪಿ. ಐ. (ಎಂ) ಶಾಂತಿ ಹಾಗೂ ಪ್ರಜಾಪ್ರಭುತ್ವದ ಶಕ್ತಿಗಳು ಹಾಗೂ ಭಾರತದ ಜನತೆ ವ್ಯಕ್ತಪಡಿಸಿದ ಹೃತ್ಪೂರ್ವಕ ಬೆಂಬಲಕ್ಕಾಗಿ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಹಾಗೂ ಜನತೆಯ ಕೃತಜ್ಞತಾಪೂರ್ವಕ ಧನ್ಯವಾದಗಳು. ನಮ್ಮೆರಡು ಪಕ್ಷಗಳು ಹಾಗೂ ಜನತೆಗಳ ನಡುವಣ ಸೌಹಾರ್ದ ಹಾಗೂ ಗೆಳೆತನ ಸದಾ ದೃಢಗೊಳ್ಳುತ್ತಿರಲಿ ಹಾಗೂ ಬೆಳೆಯುತ್ತಿರಲಿ" ಎಂದು ಆಶಿಸಿದೆ.

2. ಕೋರಿಯಾ ಕಾರ್ಮಿಕರ ಪಕ್ಷದ ಕೇಂದ್ರ ಸಮಿತಿ, ಪ್ಯೋಂಗ್‌ಯಾಂಗ್‌ನಿಂದ 4 ಜನವರಿ 1982 ರಂದು ಕಳಿಸಿದ ಸಂದೇಶದಲ್ಲಿ "ನಿಮ್ಮ ಪಕ್ಷದ ಸಮ್ಮೇಳನ ಪಕ್ಷದ ಬೆಳವಣಿಗೆ ಹಾಗೂ ದೇಶದ ಪ್ರಜಾಪ್ರಭುತ್ವಕ್ಕಾಗಿ ಹೋರಾಟವನ್ನು ಮತ್ತಷ್ಟು ದೃಢಗೊಳಿಸಲಿಯೆಂಬುದು ನಮಗೆ ಸ್ಪಷ್ಟವಾಗಿದೆ.

ಪ್ರಜಾಪ್ರಭುತ್ವ ಹಕ್ಕುಗಳ ಹಾಗೂ ದುಡಿಯುವ ಜನತೆಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಹಾಗೂ ದೇಶದ ಎಲ್ಲಾ ಪ್ರಗತಿಶೀಲ ಶಕ್ತಿಗಳೊಂದಿಗೆ ಒಗ್ಗಟ್ಟು ಸ್ಥಾಪಿಸುವಲ್ಲಿ ಸಿ. ಪಿ. ಐ. (ಎಂ) ಗಳಿಸಿರುವ ಸಫಲತೆಗಳ ಬಗ್ಗೆ ನಮಗೆ ಸಂತೋಷವಾಗಿದೆ. ಇದಕ್ಕೆ ನಮ್ಮ ಸೌಹಾರ್ದಯುತ ಬೆಂಬಲವಿದೆ.

3. ಹವಾನಾದಿಂದ ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸಮ್ಮೇಳನದ ಎಲ್ಲಾ ಪ್ರತಿನಿಧಿಗಳಿಗೆ ಕ್ಯೂಬಾದ ಎಲ್ಲಾ ಸಮರಶೀಲರ ಪರವಾಗಿ ಕ್ರಾಂತಿಕಾರಿ ಹಾಗೂ ಸೌಹಾರ್ದ ಶುಭಾಶಯ ಕಳಿಸುತ್ತಾ "ಭಾರತದ ಕಾರ್ಮಿಕವರ್ಗ ಮತ್ತು ಜನತೆಯ ಪರವಾಗಿ ಹಾಗೂ ಜಗತ್ತಿನ ಸ್ವಾತಂತ್ರ್ಯ, ಶಾಂತಿ ಹಾಗೂ ಸಮಾಜವಾದಕ್ಕಾಗಿ ಹೋರಾಡುವವರಿಗೆ ಬೆಂಬಲವಾಗಿ ಸತತವಾಗಿ ಸಾಮ್ರಾಜ್ಯಶಾಹೀ ವಿರೋಧೀ ಹೋರಾಟ ನಡೆಸಿರುವ ಸಿ.ಪಿ.ಐ.(ಎಂ) ಬಗ್ಗೆ ನಮಗೆ ಮೆಚ್ಚುಗೆಯಿದೆ. ಕ್ಯೂಬಾದ ಕ್ರಾಂತಿಗೂ ಬೆಂಬಲ ನೀಡಿದ್ದಕ್ಕಾಗಿ ನಮ್ಮ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಇನ್ನೊಮ್ಮೆ ಅರ್ಪಿಸುತ್ತಿದ್ದೇವೆ" ಎಂದು ತಿಳಿಸಿದೆ.

4. ಸಿ.ಪಿ.ಐ.(ಎಂ) ಭಾರತದ ಕಾರ್ಮಿಕ-ವರ್ಗ, ಸ್ನೇಹಮಯಿ ಭಾರತೀಯ ಜನತೆಯ ಮೂಲಭೂತ ಹಿತಾಸಕ್ತಿಗಳಿಗಾಗಿ ದೇಶದ ಸ್ವಾತಂತ್ರ್ಯ, ಅಭಿವೃದ್ಧಿಗಾಗಿ ನಡೆಸುತ್ತಿರುವ ಚಟುವಟಿಕೆಗಳನ್ನು ಸಹಾನುಭೂತಿಯಿಂದ ಗಮನಿಸುತ್ತಿದ್ದೇವೆ ಎಂದು ತನ್ನ ಸಂದೇಶದಲ್ಲಿ ತಿಳಿಸಿರುವ ರುಮಾನಿಯಾ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ "ಜಗತ್ತಿನ ಎಲ್ಲಾ ಜನತೆ ಹಾಗೂ ಶಾಂತಿಪ್ರಿಯ ಶಕ್ತಿಗಳೊಂದಿಗೆ ದೃಢ ಸೌಹಾರ್ದಭಾವ ಬೆಳೆಸಲು ಸಮಾಜವಾದೀ ರುಮಾನಿಯಾ, ಸಂಪೂರ್ಣ ರುಮಾನಿಯಾ ಜನತೆ ಏನು ಬೇಕಾದರೂ ಮಾಡಲು ದೃಢ ನಿರ್ಧಾರ ಮಾಡಿದೆ. ನಮ್ಮ ಪಕ್ಷಗಳ ನಡುವಿನ ಸಹಕಾರ ರುಮಾನಿಯಾ ಹಾಗೂ ಭಾರತೀಯ ಜನತೆಯ ಹಿತಾಸಕ್ತಿಗಳಿಗನುಗುಣವಾಗಿ, ಸಾಮ್ರಾಜ್ಯಶಾಹೀ ವಿರೋಧೀ, ಪ್ರಜಾಪ್ರಭುತ್ವವಾದೀ ಹಾಗೂ ಪ್ರಗತಿಶೀಲ ಶಕ್ತಿಗಳ ನಡುವಿನ ಸೌಹಾರ್ದಗಳಿಗನುಗುಣವಾಗಿ ಮತ್ತಷ್ಟು ಅಭಿವೃದ್ಧಿ ಹೊಂದುತ್ತದೆಯೆಂಬ ಭರವಸೆ ನಮಗಿದೆ" ಎಂದು ಹೇಳಿದೆ.

5. ಸ್ವೀಡನ್ನಿನ ಎಡಪಕ್ಷ ಕಮ್ಯುನಿಸ್ಟ್ (VPK)ರ ಅಧ್ಯಕ್ಷ ಲಾರ್ಸ್‌ವೆರ್ನರ್ ಸ್ಟಾಕ್‌ಹೋಮಿನಿಂದ ಕಳಿಸಿರುವ ಸಂದೇಶದಲ್ಲಿ ಅಮೇರಿಕದ ಸಾಮ್ರಾಜ್ಯಶಾಹೀ ತೃತೀಯ ಜಗತ್ತಿನ ದೇಶಗಳು, ವಿಶೇಷವಾಗಿ ಮಧ್ಯ ಅಮೇರಿಕಾದ ದೇಶಗಳ ವಿರುದ್ಧ ನಡೆಸಿರುವ ಆಕ್ರಮಣಗಳಿಂದಾಗಿ ಹಾಗೂ ಪೋಲೆಂಡಿನಲ್ಲಿ ಮಿಲಿಟರಿ ಆಡಳಿತದಿಂದಾಗಿ ಅಂತರಾಷ್ಟ್ರೀಯ ಪರಿಸ್ಥಿತಿ ಗಂಭೀರಗೊಂಡಿದೆ ಎಂದು ಹೇಳುತ್ತಾ "ನಾವು ಬಹಳ ದೂರದಲ್ಲಿದ್ದರೂ ಭಾರತದಲ್ಲಿನ ಬೆಳವಣಿಗೆಗಳನ್ನು ಆಸಕ್ತಿಯಿಂದ ಗಮನಿಸುತ್ತೇವೆ ಹಾಗೂ ನಿಮ್ಮ ಪಕ್ಷದ ಸಫಲತೆಗಳ ಬಗ್ಗೆ ಸಂತೋಷಪಡುತ್ತೇವೆ. ಭಾರತದ ಕಾರ್ಮಿಕರು, ರೈತರಿಗಾಗಿ, ಉತ್ತಮ ಜೀವನ ಪರಿಸ್ಥಿತಿಗಳಿಗಾಗಿ, ಪ್ರಜಾಪ್ರಭುತ್ವ, ಶಾಂತಿ ಹಾಗೂ ಸೌಹಾರ್ದಕ್ಕಾಗಿ ನಿಮ್ಮ ಹೋರಾಟಗಳನ್ನು ಮತ್ತಷ್ಟು ಮುಂದುವರಿಸುವಲ್ಲಿ ಈ ಸಮ್ಮೇಳನದ ಕಾರ್ಯಕಲಾಪಗಳು ಫಲಪ್ರದವಾಗಲಿ" ಎಂದು ಆಶಿಸಿದ್ದಾರೆ.

6. ಮಾರಿಶಸ್ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ತನ್ನ ಸಂದೇಶದಲ್ಲಿ "ಸಿ.ಪಿ.ಐ.(ಎಂ) ದೇಶದ ಕಾರ್ಮಿಕ ವರ್ಗಕ್ಕಾಗಿ ಅವರ ಆಕಾಂಕ್ಷೆಗಳನ್ನು ನೆರವೇರಿಸಲು ನಡೆಸುತ್ತಿರುವ ಹೋರಾಟಗಳಲ್ಲಿ ಈ ಸಮ್ಮೇಳನ ತನ್ನ ನಿರ್ಣಯಗಳ ಮೂಲಕ ಮಹತ್ವದ ಘಟನೆಯಾಗಲಿ" ಎಂದು ಕೋರುತ್ತಾ "ನಮ್ಮೆರಡು ಜನತೆಗಳ ಪ್ರಯೋಜನಕ್ಕಾಗಿ, ಸಮಾಜವಾದ, ಸಾಮ್ಯವಾದದತ್ತ ಮುಂದುವರಿಯುವುದಕ್ಕಾಗಿ ಇನ್ನು ಮುಂದೆಯೂ ಸಿ.ಪಿ.ಐ.(ಎಂ) ಜತೆಗೂಡಿ ಕೆಲಸ ಮಾಡಬೇಕೆಂಬ ನಮ್ಮ ಪ್ರಾಮಾಣಿಕ ಆಸೆಯನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇವೆ" ಎಂದು ಹೇಳಿದೆ.

7. ಯುಗೋಸ್ಲಾವಿಯಾದ ಕಮ್ಯುನಿಸ್ಟರ ಲೀಗಿನ ಕೇಂದ್ರಸಮಿತಿಯ ಅಧ್ಯಕ್ಷ ಮಂಡಳಿ ಸಿ. ಪಿ. ಐ. (ಎಂ)ನ 11ನೇ ಅತ್ಯುನ್ನತ ಸಮಾವೇಶಕ್ಕೆ ಶುಭ ಹಾಗೂ ಯಶಸ್ಸು ಕೋರುತ್ತಾ "ಈ ಸಮ್ಮೇಳನ ಸಾಮಾಜಿಕ ಪ್ರಗತಿ ಹಾಗೂ ಭಾರತದ ಜನತೆಯ ಒಳಿತಿಗಾಗಿ ನಿಮ್ಮ ಪಕ್ಷ ದೇಶದ ಉಳಿದ ಪ್ರಗತಿಶೀಲ ಶಕ್ತಿಗಳೊಂದಿಗೆ ನಡೆಸುವ ಹೋರಾಟಕ್ಕೆ ಮತ್ತಷ್ಟು ಚಾಲನೆ ನೀಡಲಿ" ಎಂದು ಆಶಿಸಿದೆ. ಎರಡು ಪಕ್ಷಗಳ ನಡುವಿನ ಸಂಬಂಧ ಸಹಕಾರಗಳನ್ನು ಮತ್ತಷ್ಟು ಹೆಚ್ಚಿಸಿ ನಮ್ಮೆರಡು ಅಲಿಪ್ತ ರಾಷ್ಟ್ರಗಳ ನಡುವಿನ ಸ್ನೇಹಮಯ ಸಂಬಂಧಗಳನ್ನು ಮತ್ತಷ್ಟು ಹೆಚ್ಚಿಸಿ ಶಾಂತಿ, ಸಾಮಾಜಿಕ ಪ್ರಗತಿ ಹಾಗೂ ಸಮಾಜವಾದದ ಧ್ಯೇಯ ಸಾಧನೆಯತ್ತ ಮುನ್ನಡೆಯುವ ತಮ್ಮ ಆಶಯವನ್ನು ಈ ಸಂದೇಶದಲ್ಲಿ ವ್ಯಕ್ತಪಡಿಸಲಾಗಿದೆ.

8. ಜಪಾನೀ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ಟೋಕಿಯೋದಿಂದ ಕಳಿಸಿದ ಕೇಬಲ್ ಗ್ರಾಮ್‌ನಲ್ಲಿ ಜಾಗತಿಕ ಶಾಂತಿ ಹಾಗೂ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಅಪಾಯ ಒಡ್ಡಿರುವ ಅಂತರಾಷ್ಟ್ರೀಯ ಸ್ಥಿತಿ ಹಾಗೂ ಜಪಾನ್ ಹಿಡಿದಿರುವ ಯುದ್ಧಕೋರ ಮಾರ್ಗವನ್ನು ಪ್ರಸ್ತಾಪಿಸಿ, ಜಪಾನನ್ನು ನ್ಯೂಕ್ಲಿಯರ್ ಯುದ್ಧ ಭೂಮಿಯಾಗಿ ಪರಿವರ್ತಿಸಬಾರದು ಹಾಗೂ ಜಪಾನೀ–ಅಮೇರಿಕಾ ಯುದ್ಧಕೂಟವನ್ನು ರದ್ದುಪಡಿಸಬೇಕೆಂಬ ತನ್ನ ನಿಲುವನ್ನು ತಿಳಿಸುತ್ತಾ "ಏಷ್ಯಾದಲ್ಲೇ ಇರುವ ಆದರೂ ಎರಡು ವಿಭಿನ್ನ ಚಾರಿತ್ರಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಲ್ಲಿ ದುಡಿಯುತ್ತಿರುವ ಜಪಾನೀ ಕಮ್ಯುನಿಸ್ಟ್ ಪಕ್ಷ ಹಾಗೂ ಸಿ. ಪಿ. ಐ. (ಎಂ) ನಡುವಿನ ಗೆಳೆತನದ ಹಾಗೂ ಸೌಹಾರ್ದದ ಸಂಬಂಧ ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಹೊಂದಲಿ" ಎಂದು ಆಶಿಸಿದೆ.

ಕ್ರೆಡೆನ್ಸಿಯಲ್ ಕಮಿಟಿಯ ವರದಿ

ಜನವರಿ 26ರಿಂದ 31ರವರೆಗೆ ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಸಮ್ಮೇಳನದ ಕ್ರೆಡೆನ್ಸಿಯಲ್ ಕಮಿಟಿಯ ವಿವರ ಇಂತಿದೆ:

ಸಮ್ಮೇಳನಕ್ಕೆ ಆಗಮಿಸಿದ ಒಟ್ಟು ಪ್ರತಿನಿಧಿಗಳು	548
" " " ವೀಕ್ಷಕರು	44

ಸಮ್ಮೇಳನದಲ್ಲಿ ಭಾಗವಹಿಸಿದ್ದ ಅತೀ ಹೆಚ್ಚು ವಯಸ್ಸಿನ ಪ್ರತಿನಿಧಿ ಕಾಂ. ಗಣೇಶ್‌ಘೋಷ್ (81 ವರ್ಷ)

6 ಜನ ಪ್ರತಿನಿಧಿಗಳು 25 ವರ್ಷ ವಯಸ್ಸಿನವರು ಮತ್ತು ವೀಕ್ಷಕರಾಗಿ ಆಗಮಿಸಿದ ಕಾಂ. ಶೈಲೇಂದ್ರ ಸೈಲಿ ಅತಿ ಕಡಿಮೆ (23 ವರ್ಷ) ವಯಸ್ಸಿನವರು.

ಅತಿಹೆಚ್ಚು ಅವಧಿಗೆ ಜೈಲು ಶಿಕ್ಷೆಗೆ ಗುರಿಯಾದವರು ಕಾಂ. ಗಣೇಶ್ ಘೋಷ್ : 29 ವರ್ಷ.

ಕಾಂ. ಕಿಶೋರಿಲಾಲ್	: 25 ವರ್ಷ	ಮತ್ತು	2ವರ್ಷ	ಭೂಗತ
ಕಾಂ. ಬಿನೋಯ್ ಚೌಧರಿ	: 12 "	"	10 "	"
ಕಾಂ. ಗೋಪೇನ್ ರಾಯ್	: 13 "			
ಕಾಂ. ನೃಪೇನ್ ಚಕ್ರವರ್ತಿ	: 12 "	"	6 "	"
ಕಾಂ. ಅಲ್ಲೂರಿ ಶ್ರೀಮನ್-ನಾರಾಯಣ	: 10 "	"	2 "	"
ಕಾಂ. ಸರೋಜ್ ಮುಖರ್ಜಿ	: 11 "			
ಕಾಂ. ಮಹಾದೇವ್ ಸಹಾ	: 12 "			

ಅತಿ ಹೆಚ್ಚು ಅವಧಿ ಭೂಗತರಾಗಿದ್ದವರು ಕಾಂ. ರಾಧಿಕಾಭಟ್ಟಾಚಾರ್ಯ 14 ವರ್ಷ ಮತ್ತು 6 ತಿಂಗಳು.

ಕಾಂ. ಪಿ. ದಾಸ್‌ಗುಪ್ತಾ	: 10 ವರ್ಷ
ಕಾಂ. ಇ. ಕೆ. ನಾಯನಾರ್	: 11 "
ಕಾಂ. ಪಿ. ಸುಂದರಯ್ಯ	: 12 " "
ಕಾಂ. ಪಿ. ಕೆ. ಚಂದ್ರಾನಂದನ್	: 12 " ಮತ್ತು 6 ತಿಂಗಳು
ಕಾಂ. ದಿನಕರ ಮೆಹತಾ	: 10 "

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳಲ್ಲಿ 25ಕ್ಕಿಂತ ಕಡಿಮೆ ವಯಸ್ಸಿನವರು 6 ಜನ

26ರಿಂದ 30 ವರ್ಷ	ವಯಸ್ಸಿನೊಳಗಿನವರು	26 ಜನ
31ರಿಂದ 40 "	"	112 "
41ರಿಂದ 50 "	"	159 "
51ರಿಂದ 60 "	"	167 "
61ರಿಂದ 70 "	"	88 "
70ಕ್ಕಿಂತ ಹೆಚ್ಚು ವಯಸ್ಸಿನವರು		26 "

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳಲ್ಲಿ ಪ್ರಾಥಮಿಕ ಶಿಕ್ಷಣಹೊಂದಿದ

ಸಂಗಾತಿಗಳು ಒಟ್ಟು	: 167
ಸೆಕೆಂಡರಿ ಶಿಕ್ಷಣ ಪಡೆದವರು	: 173
ಕಾಲೇಜ್‌ವರೆಗೆ ಶಿಕ್ಷಣ ಪಡೆದವರು	: 098
ಪದವೀಧರರು	: 107
ಸ್ನಾತಕೋತ್ತರರು	: 99

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳಲ್ಲಿ ಕಾರ್ಮಿಕವರ್ಗದಿಂದ ಬಂದ

ವರು ಒಟ್ಟು	72
ರೈತಾಪಿವರ್ಗದಿಂದ	74
ಭೂಹೀನ-ಬಡವರ್ಗದಿಂದ	39
ಮಧ್ಯಮವರ್ಗದ ರೈತಾಪಿವರ್ಗದಿಂದ	132
ಶ್ರೀಮಂತವರ್ಗದಿಂದ	21
ಜಮೀನ್ದಾರರ ವರ್ಗದಿಂದ	42
ಮತ್ತು ಮಧ್ಯಮವರ್ಗದಿಂದ	204

1942ಕ್ಕಿಂತಲೂ ಮುಂಚೆ	ಪಾರ್ಟಿಗೆ ಸೇರಿದವರು	112 ಜನ
1947ಕ್ಕಿಂತಲೂ ಮೊದಲು	" "	82 "
1964ಕ್ಕಿಂತಲೂ "	" "	228 "
1964ರ ನಂತರ	" "	147 "
1978ರ "	" "	15 "

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿ–27 ಜನ ಸಂಸತ್ ಸದಸ್ಯರು, ಅಸೆಂಬ್ಲಿ ಸದಸ್ಯರು-88, ನಗರಸಭೆಗಳ ಸದಸ್ಯರು–9, ಸ್ಥಳೀಯ ಸಮಿತಿಗಳ ಸದಸ್ಯರು–89 ಮತ್ತು ಸಿನೇಟ್ ಮತ್ತು ಸಿಂಡಿಕೇಟ್ ಸದಸ್ಯರು-3.

ಸಾಮ್ರಾಜ್ಯಶಾಹೀ ಅಮೇರಿಕಾ ಸಂಯುಕ್ತ ಸಂಸ್ಥಾನದ ಯುದ್ಧಖೋರ ನೀತಿ

–ರೇವಣ್ಣ

[10-1-82ರ ಐಕ್ಯರಂಗದಲ್ಲಿ 'ನ್ಯೂಟ್ರಾನ್ ಬಾಂಬ್ ಮಾನವ ಅಸ್ತಿತ್ವಕ್ಕೆ ಒಂದು ಸವಾಲು' ಎಂಬ ಸಂಘರ್ಷಣ ಲೇಖನ, ಜನವರಿ 17 ಮತ್ತು 24ರ ಐಕ್ಯರಂಗದಲ್ಲಿ ಕೆ. ವಿ. ಯವರ 'ಯೂರೋಪಿನ ಎಲ್ಲೆಡೆ ಶಾಂತಿಯಾತ್ರೆಗಳು – ರೇಗನ್‌ರ ನ್ಯೂಟ್ರಾನ್ ಯುದ್ಧ ನೀತಿಗೆ ಧಿಕ್ಕಾರ!' (ಸಂಗ್ರಹ) ಎಂಬ ಲೇಖನಗಳನ್ನು ಪ್ರಕಟಿಸಿದ್ದೆವು. ಕಳೆದ ವಾರ (31-1-82) ಸ್ಥಳಾಭಾವದಿಂದ ಈ ಲೇಖನ ಮಾಲೆಯನ್ನು ಪ್ರಕಟಿಸಿರಲಿಲ್ಲ.

ಯು. ಎಸ್. ಎ.ನ ಯುದ್ಧಕೋರ ನೀತಿಯ ಕುರಿತು ಶ್ರೀ. ರೇವಣ್ಣ ಅವರ ಲೇಖನ (ಸಂಗ್ರಹ) ಪ್ರಕಟಿಸುತ್ತಿದ್ದೇವೆ.]

ಸಾಮ್ರಾಜ್ಯಶಾಹಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ರೇಗನ್ ಮಹಾಶಯರು ಈಗಾಗಲೇ ನ್ಯೂಟ್ರಾನ್ ಬಾಂಬನ್ನು ಉಪಯೋಗಿಸುವ ವಿಚಾರದಲ್ಲಿ ಇಡೀ ವಿಶ್ವದಲ್ಲಿ ಕೋಲಾಹಲವನ್ನೇ ಎಬ್ಬಿಸಿದ್ದಾರೆ.

ಅಮೇರಿಕಾದ ಏಕಸ್ವಾಮ್ಯ ಬಂಡವಾಳದ ಮುಖಂಡರು ಎರಡನೇ ಮಹಾಯುದ್ಧದ ನಂತರ ತಮ್ಮ ಧ್ಯೇಯ (?) ಸಾಧನೆಗಾಗಿ ಮಧ್ಯ ಅಮೇರಿಕಾ, ಇರಾನ್, ಕೊರಿಯಾ ಮುಂತಾದ ದೇಶಗಳಲ್ಲಿ "ಕಮ್ಯುನಿಸ್ಟರನ್ನು ಎದುರಿಸುವುದು ಸ್ವಾತಂತ್ರ್ಯಕ್ಕಾಗಿ ಹೋರಾಟ" ಮುಂತಾದ ಘೋಷಣೆಗಳೊಂದಿಗೆ ಈ ದೇಶಗಳಲ್ಲಿ ನಡೆಯುತ್ತಿದ್ದ ವಿಮೋಚನಾ ಹೋರಾಟಗಳನ್ನು, ಪ್ರಜಾಪ್ರಭುತ್ವ ಚಳುವಳಿಗಳನ್ನು ಬಗ್ಗು ಬಡಿಯಲು ಪ್ರಯತ್ನಿಸುತ್ತಿದ್ದಾರೆ.

1950-60ರ ದಶಕದಲ್ಲಿ ಸ್ವಲ್ಪ ಮಟ್ಟಿಗೆ ಈ ಘೋಷಣೆ ಫಲಪ್ರದವಾಯಿತು.

ನಂತರ ವಿಯೆಟ್ನಾಂ ಮತ್ತು ಇತರೇ ದೇಶಗಳಲ್ಲಿ ಅನುಭವಿಸಿದ ಸೋಲಿನಿಂದಾಗಿ ಸಾಮ್ರಾಜ್ಯಶಾಹಿಗಳು ಹಿಂದಕ್ಕೆ ಸರಿಯಬೇಕಾಯಿತು. ಆದ್ದರಿಂದಲೇ ಮಾಜೀ ಅಧ್ಯಕ್ಷ ಕಾರ್ಟರ್‌ರವರು 'ಮಾನವೀಯ ಹಕ್ಕುಗಳು' ಎಂಬ ಪೋಷಾಕನ್ನು ತೊಟ್ಟು ತಮ್ಮ ಮತ್ತು ಇತರ ಜನರನ್ನು ಸ್ವಾಂತನಗೊಳಿಸುವುದರಲ್ಲಿ ಕಾಲ ಕಳೆದರು.

ಆದರೆ ರೇಗನ್ ಬಂದ ಮೇಲೆ ಈ ಧೋರಣೆ ಬದಲಾಗಿ ಸೋವಿಯತ್ ದೇಶ ಮತ್ತು ಹಿಂದುಳಿದ ದೇಶಗಳ ಮೇಲೆ ಹೊಸ ರೀತಿಯ ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತಿದೆ. ಸೋವಿಯತ್ ದೇಶದ ವಿರುದ್ಧ ಉಗ್ರವಾಗಿ ನಡೆದುಕೊಳ್ಳುವುದೂ ಹಿಂದುಳಿದ ದೇಶಗಳಲ್ಲಿ ನೇರವಾಗಿ ಮಧ್ಯೆ ಪ್ರವೇಶಿಸುವುದು ಈ ಧೋರಣೆಯ ಅಂಶಗಳಾಗಿವೆ. ಸೋವಿಯತ್ ದೇಶವನ್ನು 'ನ್ಯೂಕ್ಲಿಯರ್' ಯುದ್ಧದಲ್ಲಿ ಸೋಲಿಸುವುದು ಈ ಧೋರಣೆಯಲ್ಲಿ ಸೇರಿದೆ.

ಎಲ್ ಸಾಲ್ವಡೋರ್‌ನಲ್ಲಿ, ಗ್ವಾಟಿಮಾಲಾದಲ್ಲಿ, ಹೊಂಡುರಾಸ್‌ನಲ್ಲಿ ನಿರಂಕುಶ ಪ್ರಭುತ್ವವನ್ನು ರಕ್ಷಿಸುತ್ತಿರುವುದು; ನಿಕರಾಗುವದಲ್ಲಿ 2 ವರ್ಷದಿಂದ ಇರುವ ಕ್ರಾಂತಿಕಾರಿ ನಾಯಕತ್ವದ ಅಧಿಕಾರವನ್ನು ಉರುಳಿಸುವುದು; ಸಮಾಜವಾದಿ ದೇಶವಾದ ಕ್ಯೂಬಾವನ್ನು ಆಕ್ರಮಣ ಮಾಡುವ ಯೋಜನೆ ಹಾಕುವುದು ಇದರಲ್ಲಿ ಸೇರಿದೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣನೀತಿ ಅನುಸರಿಸುತ್ತಿರುವ ದಕ್ಷಿಣ ಆಫ್ರಿಕಾ ಸರಕಾರದೊಡನೇ ನೇರ ಸಂಬಂಧ ಇಟ್ಟುಕೊಂಡಿರುವುದು; ನಮೀಬಿಯಾದಲ್ಲಿ ಎಸ್. ಡಬ್ಲ್ಯು. ಎ. ಪಿ. ಓ. ನಾಯಕತ್ವಕ್ಕೆ ಅಧಿಕಾರ ಬಿಟ್ಟುಕೊಡುವುದಕ್ಕೆ ಅಡ್ಡಿ ಬರುತ್ತಿರುವುದು; ಅಂಗೋಲಾದಲ್ಲಿ ಎಂ.ಪಿ.ಎಲ್.ಎ. ಸರಕಾರವನ್ನು ಉರುಳಿಸಲು ಪ್ರಯತ್ನ; ಇಥೋಪಿಯಾದಲ್ಲಿ ಪುರೋಗಾಮೀ ಸರ್ಕಾರವನ್ನು ಉರುಳಿಸುವ ಪ್ರಯತ್ನ; ತನ್ನ ವಿಶೇಷ ಪಡೆಯ ಮೂಲಕ ಅರಬ್ ದೇಶಗಳಲ್ಲಿರುವ ತೈಲ ಗಣಿಗಳನ್ನು ವಶಪಡಿಸಿಕೊಳ್ಳುವ ಯೋಜನೆ ಹಾಕಿರುವುದು; ಪಾಕೀಸ್ತಾನವನ್ನು ತನ್ನ ಅಸ್ತ್ರವನ್ನಾಗಿ ಉಳಿಸಿಕೊಳ್ಳುವುದು, ದಕ್ಷಿಣ ಏಷ್ಯಾದಲ್ಲಿ ಎ.ಎಸ್.ಇ.ಎ.ಎನ್. ಗುಂಪಿನ ದೇಶಗಳ ಮೂಲಕ ವಿಯೆಟ್ನಾಂ ಮತ್ತು ಕಾಂಪೂಚಿಯಾ ದೇಶಗಳನ್ನೂ ಹೊರಗಡೆ ಇಡುವ ಪ್ರಯತ್ನ ಇವೆಲ್ಲವೂ ಈ ಧೋರಣೆಯ ಸ್ಪಷ್ಟ ನಿದರ್ಶನಗಳಾಗಿವೆ.

ಆದರೆ 80ರ ದಶಕ 50ರ ದಶಕವಾಗಿಲ್ಲ. ಎಲ್ಲ ದೇಶಗಳೂ ಈ ಯುದ್ಧಕೋರ ನೀತಿಯ ವಿರುದ್ಧ ಎದ್ದು ನಿಂತಿವೆ.

ಈ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧವಾಗಿ ಸೋವಿಯತ್ ಒಕ್ಕೂಟ ಮುಂಚೂಣಿಯಲ್ಲಿದೆ. ಆದ್ದರಿಂದ ಜನರನ್ನು ತಪ್ಪುದಾರಿಗೆಳೆಯಲು ಸಾಮ್ರಾಜ್ಯಶಾಹಿ ಅಮೇರಿಕಾಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಎಲ್ಲ ಪ್ರಜಾಪ್ರಭುತ್ವವಾದಿಗಳ ಹಾಗೂ ಸಮಾಜವಾದಿಗಳ ಮುಖ್ಯ ಕರ್ತವ್ಯ ಸಾಮ್ರಾಜ್ಯಶಾಹಿಗಳ ಧೋರಣೆಯನ್ನು ಎದುರಿಸುವುದೇ ಆಗಿದೆ.

ಕೆಳಕಾಣಿಸಿರುವ ಪ್ರದೇಶಗಳಲ್ಲಿ 1945ರಿಂದ 1980ರವರೆಗೆ ಅಮೇರಿಕಾ ಸಾಮ್ರಾಜ್ಯಶಾಹಿ ಮಧ್ಯಪ್ರವೇಶಿಸಿದೆ.

1. ಚೀಣಾ

(1945-49)

ಒಂದು ಲಕ್ಷ ಹತ್ತು ಸಾವಿರ ಭೂಪಡೆ ಮತ್ತು ವಿಮಾನಪಡೆಯ ನೇರ ಪ್ರವೇಶದಿಂದ ಚಿಯಾಂಗ್-ಕೈ-ಶೇಕ್ ಸರಕಾರಕ್ಕೆ ವಿಮೋಚನಾ ಸಮರದ ವಿರುದ್ಧ ಸಹಾಯ :

2. ಗ್ರೀಸ್

((1946-49)

ಕಮ್ಯುನಿಸ್ಟ್ ಚಳುವಳಿಯು ನಾಯಕತ್ವ ಅಧಿಕಾರ ಹಿಡಿಯುತ್ತಿದನ್ನು ತಪ್ಪಿಸಿ ನಿರಂಕುಶ ಪ್ರಭುತ್ವಕ್ಕೆ ಬೆಂಬಲ ನೀಡಿ ಬ್ರಿಟಿಷ್ ಪಡೆಯನ್ನು ತಂದದ್ದು :

3. ಕೊರಿಯಾ

(1950)

ಮ್ಯಾಥ್ಯೂರಿಡ್ಜವೇ ಎಂಬ ಅಮೇರಿಕನ್ ದಂಡನಾಯಕನ ನೇತೃತ್ವದಲ್ಲಿ ದಕ್ಷಿಣ ಕೊರಿಯಾದಲ್ಲಿ 13 ಲಕ್ಷ ಕೊರಿಯನರ ಸಾವು :

4. ಗ್ವಾಟೆಮಾಲ

(1954)

ಗ್ವಾಟೆಮಾಲಾದ ಅಧ್ಯಕ್ಷ ಆರ್ಬೆಂಡ್ ಅವರು ಅನುಸರಿಸುತ್ತಿದ್ದ ಸ್ವತಂತ್ರ ನೀತಿಯ ವಿರುದ್ಧವಾಗಿ ಆ ಸರಕಾರವನ್ನು ಉರುಳಿಸಲು ಮಾಡಿದ ಆಕ್ರಮಣ ;

5. ಲೆಬನಾನ್

(1958)

ಆ ದೇಶದ ವಿರುದ್ಧವಾಗಿ ನೌಕಾಪಡೆಯನ್ನು, ಭೂಸೇನೆಯನ್ನು, ವಾಯು ಪಡೆಯನ್ನು ಲೆಬನಾನ್ ಕಡಲ ತೀರದಲ್ಲಿ ಇಳಿಸಿದ್ದು :

6. ಕ್ಯೂಬಾ

(1961)

ಫಿಡೆಲ್ ಕ್ಯಾಸ್ಟ್ರೋ ಅವರ ಸರಕಾರವನ್ನು ಉರುಳಿಸಲು ನಡೆದ ಯತ್ನ; ಬಿ-26 ಬಾಂಬರಗಳ ಸಹಿತ ಕ್ಯೂಬಾ ದೇಶಗಳ ದಕ್ಷಿಣ ತೀರದಲ್ಲಿ ಅಮೇರಿಕಾ ಸೇನೆಯ ಪ್ರವೇಶ :

7. ಡಾಮಿನಿಕನ್ ಗಣರಾಜ್ಯ

(1965)

ಅಮೇರಿಕಾ ಸಾಮ್ರಾಜ್ಯಶಾಹಿ ನೀತಿಗನುಗುಣವಾಗಿ ನಡೆದುಕೊಳ್ಳತಕ್ಕಂತಹ ಒಂದು ಸರಕಾರದ ಸ್ಥಾಪನೆಗಾಗಿ ಡಾಮಿನಿಕನ್ ಗಣರಾಜ್ಯದಲ್ಲಿ ಅಮೇರಿಕಾದ ಸೇನೆ ಪ್ರವೇಶ :

8. ವಿಯೆಟ್ನಾಂ

(1965-1973)

ವಿಮೋಚನಾ ಸಮರದ ವಿರುದ್ಧ ಬಹಳ ಉನ್ನತ ರೀತಿಯಲ್ಲಿ ಮಿಲಿಟರಿ ಕಾರ್ಯಾಚರಣೆ; 1973ರಲ್ಲಿ ಸುಮಾರು 5 ಲಕ್ಷ ದಕ್ಷಿಣ ವಿಯೆಟ್ನಾಂನ ಪ್ರಜೆಗಳು ಮಡಿದರು :

9. ಕಾಂಬೋಡಿಯಾ

(1970)

ಅಮೇರಿಕಾ ಸಾಮ್ರಾಜ್ಯಶಾಹಿ ಧೋರಣೆಯನ್ನು ಅನುಸರಿಸುವ ಸರಕಾರಕ್ಕಾಗಿ ಅಲ್ಲಿ ನೇರ ಪ್ರವೇಶ; 2 ತಿಂಗಳ ಸತತ ಮಿಲಿಟರಿ ಕಾರ್ಯಾಚರಣೆ :

10. ಲಾವೋಸ್

(1970)

ಅಲ್ಲಿನ ರಾಷ್ಟ್ರೀಯ ಸರಕಾರ ವಿಯೆಟ್ನಾಂ ಗಣರಾಜ್ಯದೊಡನೆ ಬಾಂಧವ್ಯ ಕಲ್ಪಿಸಿಕೊಳ್ಳುವುದಕ್ಕೆ ಅಡ್ಡ ಬಂದು, ಭೂಪಡೆ, ವಾಯು ಪಡೆಗಳಿಂದ ಕಾರ್ಯಾಚರಣೆ ನಡೆಸಿದ್ದು :

11. ಅಂಗೋಲಾ

(1975)

ಅಂಗೋಲಾದಲ್ಲಿರುವ ಜನಮನ್ನಣೆ ಪಡೆದ ಸರಕಾರದ ವಿರುದ್ಧ ಬಂಡೇಳುವಂತೆ ಮಾಡಲು ದಂಗೆಕೋರ ನಾಯಕ ಹೋಲ್ಡನ್ ರಾಬರ್ಟ್‌ಗೆ ಶಸ್ತ್ರಾಸ್ತ್ರ ನೆರವು; 14 ದಶಲಕ್ಷ ಡಾಲರ್‌ಗಳ ಸಹಾಯ; ದಂಗೆಕೋರರನ್ನು ತರಬೇತುಗೊಳಿಸುವ ಕಾರ್ಯಕ್ರಮ :

12. ಪರ್ಶಿಯನ್ ಖಾರಿ

(1980)

ಎರಡನೇ ಮಹಾಯುದ್ಧದಿಂದ ಜನವರಿ 80ರ ವೇಳೆಗೆ ಪರ್ಶಿಯನ್ ಖಾರಿಯಲ್ಲಿ ಅಮೇರಿಕಾ ತನ್ನ ಅತ್ಯಂತ ದೊಡ್ಡದಾದ ನೌಕಾಪಡೆಯನ್ನು ಹೊಂದಿತ್ತು. ಈ ನೌಕಾಪಡೆಯಲ್ಲಿ ವಿಮಾನ ಸಾಗಿಸುವ ಯುದ್ಧ ನೌಕೆಗಳು, ಮಿಸ್ಸೈಲ್ ನೌಕೆಗಳೂ ಇದ್ದುವು. ಇರಾನ್ ಮತ್ತು ಅಫಘಾನಿಸ್ಥಾನದ ಜನರನ್ನು ಭಯೋತ್ಪಾದನೆಯಲ್ಲಿ ಇಡುವುದು; ಅಮೇರಿಕಾ ಸಂಯುಕ್ತ ಸಂಸ್ಥಾನದ ತೈಲದ ಏಕಸ್ವಾಮ್ಯಗಳ ರಕ್ಷಣೆ ಮತ್ತು ಹಿಂದೂ ಮಹಾಸಾಗರದಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸುವುದು ಇದರ ಉದ್ದೇಶ.

ಅಮೇರಿಕಾ ಸಂಯುಕ್ತ ಸಂಸ್ಥಾನವು ತನ್ನ ಸೈನಿಕ ಪಡೆಯನ್ನು ಮತ್ತು ಸೈನಿಕ ಶಿಬಿರಗಳನ್ನು ಕೆಳಕಂಡ ಪ್ರದೇಶಗಳಲ್ಲಿ ನೆಲೆಗೊಳಿಸಿದೆ. ಹಾಗೂ 1980ರಿಂದೀಚೆ ಸಂಖ್ಯೆಯನ್ನೂ ಹೆಚ್ಚಿಸಿದೆ. ವಿವರ ಇಂತಿದೆ:

(7ನೇ ಪುಟ ನೋಡಿ)

ವಿಚಾರ ಸಂಕಿರಣ

20-1-82ರಂದು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ದ. ಸಂ. ಸ. ಆಶ್ರಯದಲ್ಲಿ 'ವಿಶೇಷ ಲಾತಿ' ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಇತ್ತೀಚಿಗೆ ಬಲಿಷ್ಠವಾಗುತ್ತಿರುವ ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳು ಹೂವಿನ ಹಡಗಲಿಯ ಪಟ್ಟಭದ್ರರ ಕಣ್ಣು ಕೆಂಪಾಗಿಸಿದೆ. ಈ ಕಾರಣದಿಂದಾಗಿ ಪರಿಸ್ಥಿತಿ ಬಿಸಿ (ಟೆನ್‌ಶನ್) ಆಗಿದ್ದರೂ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆದಿದೆ.

ಪ್ರೊ|| ಗಂಡಿಹಳ್ಳಿ ನಾಗರಾಜ್, ನ್ಯಾಯವಾದಿ ಎಂ. ಪಿ. ಪ್ರಕಾಶ್, ಪದ್ಮನಗೌಡ, ಡಿ. ಉಲ್ಲಾಸ ಮೊದಲಾದವರು ವಿಶೇಷಲಾತಿಯ ವಿವಿಧ ಆಯಾಮಗಳ ಬಗ್ಗೆ ಗಂಭೀರವಾದ ವಿಚಾರಗಳನ್ನು ಮಂಡಿಸಿದರು. ಆದಿ ರಾಜಪ್ಪ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಕಂಡುಬಂದ ಎಷ್ಟೋ ಜನರ ಶಂಕೆ, ಅನುಮಾನಗಳಿಗೆ ಭಾಷಣಕಾರರು ಸೂಕ್ತ ಉತ್ತರ ಕೊಟ್ಟರು.

ಒಟ್ಟು ಆರೋಗ್ಯಪೂರ್ಣವಾದ ಸಂವಾದ, ದ. ಸಂ. ಸ.ಯ ಈ ಕಾರ್ಯಕ್ರಮದಿಂದ ಏರ್ಪಡಿಸಲು ಸಾಧ್ಯವಾಗಿದೆ.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಮಹಾ ಮುಷ್ಕರ - ಕಲಿಯತಕ್ಕ ಪಾಠ

ಎನ್. ಕೆ. ಉಪಾಧ್ಯಾಯ

ಜನವರಿ 19ರ ರಾಷ್ಟ್ರಾದ್ಯಂತ ಮಹಾ ಮುಷ್ಕರ ಯಶಸ್ವಿಯಾಗಿ ಮುಕ್ತಾಯವಾಯಿತು. ಮುಖ್ಯಮಂತ್ರಿ ಗುಂಡೂರಾವ್, ಕೆ.ಪಿ.ಸಿ.ಸಿ. ಅಧ್ಯಕ್ಷ ಕೆ.ಟಿ. ರಾಠೋಡ್ ಅವರ ಹೇಳಿಕೆ ಹಾಗೂ ರೇಡಿಯೋ ಪ್ರಚಾರಗಳಂತೆ ಈ ಮುಷ್ಕರ ಸಂಪೂರ್ಣ ವಿಫಲಗೊಂಡಿದೆ. ನಿಜಸಂಗತಿ ಆಯಾ ಪಟ್ಟಣದ, ಊರಿನ ಜನಸಮೂಹಕ್ಕೆ ಗೊತ್ತು. ವಿವರವಾದ ವರದಿಗಳು ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮುಷ್ಕರ, ಬಂದ್ ಯಶಸ್ವಿಯಾಗಿವೆಂಬುದಕ್ಕೆ ಪುಷ್ಟಿ ಕೊಟ್ಟಿವೆ.

ರೇಲ್ವೆ, ಪೋಸ್ಟ್, ಟೆಲಿಫೋನ್, ನೀರು ಪೂರೈಕೆ, ಆಸ್ಪತ್ರೆ, ಹಾಲು ಪೂರೈಕೆಗಳೆಲ್ಲ ಸರಿಯಾಗಿ ಕೆಲಸ ಮಾಡಿವೆ. ಆದ್ದರಿಂದ ಮುಷ್ಕರ ಸಂಪೂರ್ಣ ವಿಫಲಗೊಂಡಿದೆಂದು ದಿಲ್ಲಿಯಿಂದ ಹಿಡಿದು ಬೆಂಗಳೂರಿನವರೆಗಿನ ಹಿರಿ-ಕಿರಿ ಮುಖಂಡರೆಲ್ಲ ಆತ್ಮಸಂತೋಷ ವ್ಯಕ್ತಪಡಿಸಿದ್ದಾರೆ. ತಮ್ಮಲ್ಲಿ ಹುದುಗಿಕೊಂಡಿರುವ ನಡುಕ, ಭೀತಿಗೆ ಸಾರ್ವಜನಿಕವಾಗಿ ತಣ್ಣೀರು ಚೆಲ್ಲಿಕೊಳ್ಳಲು ಈ ಕ್ರಮ ಕೈಗೊಂಡಿದ್ದಾರೆ.

ಜನವರಿ 19ರ ಮುಷ್ಕರ ಯಶಸ್ವಿಯಾಗಿ, ದೇಶದ ಕಾರ್ಮಿಕ ವರ್ಗದ ಚರಿತ್ರೆಯಲ್ಲಿ ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದೆಯಲ್ಲದೆ, ಈ ಸಾಂಕೇತಿಕ ಮುಷ್ಕರಕ್ಕೆ ಎಲ್ಲ ವಿರೋಧಿ ಪಕ್ಷಗಳು ಬೆಂಬಲ ನೀಡಿ, ಸಾರ್ವಜನಿಕರ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಗಿರುವುದರಿಂದಲೇ, ಸಾರ್ವತ್ರಿಕ ಮುಷ್ಕರ, ಭಾರತ ಬಂದಾಗಿ ಪರಿವರ್ತನೆಗೊಂಡು ಆಳುವ ಪಕ್ಷದಲ್ಲಿ ಭಯ ಭೀತಿಯನ್ನುಂಟುಮಾಡಿದೆಂದು ಹೇಳಿದರೆ ತಪ್ಪೇನಿಲ್ಲ.

ಕಾರ್ಮಿಕ ಸಂಘಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಾಗಲೇ, ವಿರೋಧ ಪಕ್ಷಗಳೂ, ವಿದ್ಯಾರ್ಥಿಗಳೆಲ್ಲ ಅದಕ್ಕೆ ಬೆಂಬಲ ವ್ಯಕ್ತಮಾಡಿದಾಗಲೇ ಇಂದಿರಾಗಾಂಧಿ ಇದು ದೇಶದ್ರೋಹಿ ಕ್ರಮವೆಂದು ಸಾರಿ, ದೇಶದ ಸರಕಾರಿ ಯಂತ್ರವನ್ನೆಲ್ಲ, ಮುಷ್ಕರ ಮುರಿಯಲಿಕ್ಕೆ ಉಪಯೋಗಿಸಿದರೂ, ರೇಡಿಯೋದಲ್ಲಿ ಪ್ರತಿದಿನ ಅಪಪ್ರಚಾರ ಮಾಡಿದರೂ, ಒಂದು ದಿನದ ಮುಷ್ಕರಕ್ಕೆ 8 ದಿವಸದ ಪಗಾರ ಕಡಿತ, ಇತರ ಸವಲತ್ತುಗಳಿಗೆ ಸಂಚಕಾರ, ನೌಕರಿಯಿಂದಲೇ ಬಡತರ್ಫ-ಮೊದಲಾದ ಭೀತಿಯ ಬಾಣಗಳನ್ನೆಸೆದರೂ, ಸಮಾಜದ್ರೋಹಿಗಳೆಂದು ಲಕ್ಷಕ್ಕೂ ಮೇಲ್ಪಟ್ಟು ಮುಖಂಡರನ್ನೆಲ್ಲ ಬಂಧಿಸಿದರೂ, "ಕಂಡಲ್ಲಿ ಗುಂಡು" ಘೋಷಿತ-ಬಡಿತಗಳಂಥ ಕ್ರೂರಕ್ರಮಗಳನ್ನನುಸರಿಸಿದರೂ ಕೂಡ, ಕಾರ್ಮಿಕರ ಸಾರ್ವಜನಿಕರ ಕೋಪವನ್ನು ತಣಿಸಲು ಸಾಧ್ಯವಾಗದೆ ಯಶಸ್ವಿ ಮುಷ್ಕರವನ್ನೆದುರಿಸಬೇಕಾಯಿತು.

ವಿದ್ಯುಚ್ಛಕ್ತಿ, ನೀರು ಪೂರೈಕೆ, ದವಾಖಾನೆ, ಹಾಲು ಪೂರೈಕೆಗಳನ್ನು ಮುಷ್ಕರದಿಂದ ಮುಕ್ತಗೊಳಿಸುವ ನಿರ್ಣಯವನ್ನು ಕೇಂದ್ರ ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿಯೇ ಪ್ರಕಟಿಸಿತ್ತು. ಕೇಂದ್ರ-ರಾಜ್ಯ ಸರಕಾರಿ ನೌಕರರು, ರೇಲ್ವೆ, ಪೋಸ್ಟ್-ಟೆಲಿಫೋನ್ ನೌಕರರೆಲ್ಲ ಕರಾಳದಿನವನ್ನಾಚರಿಸಿ ಬೆಂಬಲ ಪ್ರದರ್ಶಿಸಿವೆ. ಇವುಗಳಲ್ಲಿ ದುಡಿಯುವ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿಲ್ಲೆಂದು ಹೇಳಿ ಆಳುವ ಪಕ್ಷ 19ರ ಮುಷ್ಕರ ವಿಫಲವಾಗಿದೆಂದು ಅಪಪ್ರಚಾರ ಮಾಡುತ್ತಿರುವುದು ಸರಕಾರದ ಚಿಲ್ಲರೆತನವನ್ನು ಪ್ರದರ್ಶಿಸುತ್ತದೆ.

ಸರಕಾರ ನಡುಗಿತು ಏಕೆ?

ಜನವರಿ 19ರ ಮುಷ್ಕರದ ತಯಾರಿ ನೋಡಿ ಕೇಂದ್ರ ಸರಕಾರ ನಡುಗಿತು. ಕಾಂಗ್ರೆಸ್ ಕಾರ್ಮಿಕ ಸಂಘಟನೆಯನ್ನು ಬಿಟ್ಟು ಇತರ ಎಲ್ಲ 8 ಕೇಂದ್ರ ಕಾರ್ಮಿಕ ಸಂಘಟನೆಗಳು, 40 ಅಖಿಲ ಭಾರತ ಫೆಡರೇಶನುಗಳು ಒಂದಾಗಿ ಕಳೆದ 6 ತಿಂಗಳಿಂದ ಐಕ್ಯತೆ ಹೋರಾಟದ ಸಿದ್ಧತೆ ನಡೆಸುತ್ತ ಬಂದಿವೆ. 16-9-81ರ ಸಾರ್ವತ್ರಿಕ ಪ್ರತಿಭಟನಾ ದಿನ, ನವೆಂಬರ್ 23ರ ಆದರ್ಶಪೂರ್ಣ "ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮಗಳನ್ನು ನೋಡಿಯೇ ಇಂದಿರಾಗಾಂಧಿಯ ಎದೆ ಬಡಿತ ತೀವ್ರಗೊಂಡಿರಬೇಕು. ಉರಿಯುವ ಬೆಂಕಿಗೆ ಚಿಮಣಿ ಎಣ್ಣೆ ಸುರಿಯುವಂತೆ, ಒಂದರ ಹಿಂದೊಂದರಂತೆ ಎಲ್ಲ ವಿರೋಧಿ ಪಕ್ಷಗಳೂ, ವಿದ್ಯಾರ್ಥಿ, ಯುವ ಜನತೆ, ರೈತ ಸಂಘಟನೆಗಳೂ ತಮ್ಮ ಬೆಂಬಲ ವ್ಯಕ್ತಮಾಡಿ, 19ರ ಸಾರ್ವತ್ರಿಕ ಮುಷ್ಕರವನ್ನು, ಇಡೀ ಜನತೆಯ ಸಾರ್ವತ್ರಿಕ ಪ್ರತಿಭಟನೆಯ ದಿನವನ್ನಾಗಿ ಆಚರಿಸಲು ಸಂಪೂರ್ಣ ಬಂದ್ ಆಗಿ ಪರಿವರ್ತಿಸಲು ಪ್ರಯತ್ನಿಸಿದಾಗ ಇಂದಿರಾ ಗಾಂಧಿಯ ತಲೆ ಕೆಟ್ಟು, ಕಂಡಲ್ಲಿ ಗುಂಡು ಹಾರಿಸುವ, ಅಮಾನುಷ ದಬ್ಬಾಳಿಕೆ ನಡೆಸುವ ಕಾರ್ಯಕ್ರಮವನ್ನು, ಗೋಬೆಲ್ಸನ ಪ್ರಚಾರ ವೈಖರಿಯನ್ನೂ ಅನುಸರಿಸಬೇಕಾಯಿತು.

ಬಂಡವಾಳದಾರರ ಸೇವೆ ಮಾಡುತ್ತಿರುವ ತನ್ನ ಕಾರ್ಮಿಕ ವಿಭಾಗಕ್ಕೆ (ಐ.ಎನ್.ಟಿ.ಯು.ಸಿ.) ಕಾರ್ಮಿಕರ ಬೆಂಬಲವಿಲ್ಲ. ಬೆಲೆಯೇರಿಕೆ ಸಾರ್ವಜನಿಕರನ್ನು ತತ್ತರಿಸುತ್ತಿದೆ. ರೈತ ಬೆಳೆಯುವ ಬೆಳೆಗೆ ನ್ಯಾಯಬೆಲೆಸಿಗದೆ ರೈತಾಪಿವರ್ಗ ಸಿಡಿದೇಳಿದೆ ರಾಷ್ಟ್ರೀಯ ರಕ್ಷಣಾ ಕಾಯಿದೆ, ಅತ್ಯಾವಶ್ಯಕ ಸೇವೆಗಳಲ್ಲಿ ಮುಷ್ಕರ ಪ್ರತಿಬಂಧಿಸುವ ಕಾನೂನು, ವಿದೇಶಿ ಹಣಕಾಸು ಸಂಸ್ಥೆಯ ಸಾಲಗಳೆಲ್ಲ ಕಾರ್ಮಿಕರಲ್ಲಿ ಅಸಂತುಷ್ಟಿಯನ್ನುಂಟುಮಾಡಿದೆ. ಇಂದಿರಾ ಕಾಂಗ್ರೆಸ್ ಬೆಂಬಲಿಗರ ಒಂದು ಸಣ್ಣ ಗುಂಪನ್ನು ಬಿಟ್ಟರೆ ದೇಶದ ಜನತೆ 19ರ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಿದೆ. ಇಂಥ ಅಪಾರ, ಅನಿರೀಕ್ಷಿತ ಬೆಂಬಲವನ್ನು ನೋಡಿಯೇ ಸರಕಾರ ಧೃತಿಗೆಟ್ಟು ವರ್ತಿಸಲು ಪ್ರಾರಂಭಮಾಡಿತು. ಈ ಮುಷ್ಕರ, ಸಾರ್ವತ್ರಿಕ ಪ್ರತಿಭಟನೆ ದೇಶದ ರಾಜಕೀಯದಲ್ಲಿ ಹೊಸ ತಿರುವನ್ನುಂಟುಮಾಡಬಹುದೆಂಬ ಭೀತಿ ಇಂದಿರಾಗಾಂಧಿಯನ್ನಾವರಿಸಿರಬೇಕು. 1977ರ ಪುನರಾವರ್ತಿಯಾದರೇನು ಗತಿ ಎಂಬ ಚಿಂತೆಯಿಂದಾಗಿಯೇ ಈ ಸಾರ್ವತ್ರಿಕ ಮುಷ್ಕರಕ್ಕೆ ಭಾರತ ಬಂದ್ ಎಂದು ನಾಮಕರಣಮಾಡಿ, ಇದು ದೇಶದ್ರೋಹಿ ಕ್ರಮ, ಇದನ್ನು ತನ್ನ ಪಾರ್ಟಿ, ತನ್ನ ಸರಕಾರ ಸಂಪೂರ್ಣ ಹತ್ತಿಕ್ಕಬೇಕೆಂದು ಕರೆ ನೀಡಿ, ಸರ್ವವಿಧದಿಂದಲೂ ಇದು ವಿಫಲಗೊಳ್ಳುವಂತೆ ಪ್ರಯತ್ನಿಸಿದರು. ಆದರೆ ದುಡಿಯುವ ಜನತೆ ಯಾವ ದಬ್ಬಾಳಿಕೆಗೂ ಅಂಜದೆ ಎಲ್ಲ ರೀತಿಯ ದಬ್ಬಾಳಿಕೆ, ಅಪಪ್ರಚಾರಗಳನ್ನೆದುರಿಸಿ ತಮ್ಮ ಮುಷ್ಕರವನ್ನು ಯಶಸ್ವಿಗೊಳಿಸಿರುವುದನ್ನು ನೋಡುವಾಗ ಜನತೆಯಲ್ಲಿ ಒಡಮೂಡುತ್ತಿರುವ ಹೊಸ ಜಾಗೃತಿಯು ಕಿಡಿಕಾಣಬಹುದಾಗಿದೆ. ಎಂಥ ಗಂಡಾಂತರವನ್ನಾಗಲೀ, ಎಷ್ಟು ಕಷ್ಟಗಳನ್ನಾಗಲಿ ಎದುರಿಸಲು ತಾವು ಸಿದ್ಧವೆಂಬುದನ್ನು 19ರ ಸಾರ್ವತ್ರಿಕ ಮುಷ್ಕರ ತೋರಿಸಿಕೊಟ್ಟಿದೆ.

"ಉದ್ದೇಶಿತ ಮುಷ್ಕರದ ವಿರುದ್ಧ ಕಾರ್ಮಿಕವರ್ಗದ ಬಹುಜನರ ವಿರೋಧವಿದೆ ಎಂದು ಸಂಗ್ರಹಿತ ಮಾಹಿತಿಗಳಿಂದ ಗೊತ್ತಾಗಿದೆಂದು ಕೇಂದ್ರ ಗೃಹಮಂತ್ರಿ ಜೇಲ್‌ಸಿಂಗ್ ಹೇಳಿರುವ ಮಾತು ಎಷ್ಟು ಸುಳ್ಳು ಎಂಬುದನ್ನು 19ರ ಘಟನೆ ತೋರಿಸಿಕೊಟ್ಟಿದೆ. ಸರಕಾರ ಕಾನೂನಿನಂತೆ ಕೆಲಸಮಾಡುವುದೇ ವಿನಾ ಯಾರಿಗೂ ಅನ್ಯಾಯ ಮಾಡುವುದಿಲ್ಲೆಂದು ಜೇಲ್‌ಸಿಂಗ್ ಅವರು ಹೇಳಿದ್ದರೂ, ಲಕ್ಷಾವಧಿ ಮುಖಂಡರನ್ನು ಬಂಧಿಸಿ, ಕಾರ್ಮಿಕರ ಮೇಲೆ ಅಲ್ಲಸಲ್ಲದ ಬೆದರಿಕೆ ಹಾಕಿರುವುದನ್ನು ನೋಡುವಾಗ ಸರಕಾರದ ಕಾನೂನು ಯಾರಿಗಾಗಿದೆಯೆಂಬುದು ಕಂಡುಬರುತ್ತದೆ.

ಕಾರ್ಯಕ್ರಮ, ನೀತಿ ಮತ್ತು ತತ್ವಗಳ ಬಗ್ಗೆ ಸಮಾನ ದೃಷ್ಟಿಯಿಲ್ಲದ ವಿವಿಧ ವಿರೋಧಿ ಪಕ್ಷಗಳು ಈ "ವಿಧ್ವಂಸಕ ಉದ್ದೇಶ" ಒಟ್ಟುಗೂಡಿರುವುದಕ್ಕೆ ಮಂತ್ರಿಗಳು ಆಶ್ಚರ್ಯ ವ್ಯಕ್ತಪಡಿಸಿದರು. ಆಳುವ ಪಕ್ಷದ ದೃಷ್ಟಿಯಲ್ಲಿ ಶಾಂತಿಯುತ ಪ್ರತಿಭಟನೆಯೂ ವಿಧ್ವಂಸಕ ಕೃತಿಯಾಗುತ್ತದೆ. ತಾನು ಮತೀಯ, ಛಿದ್ರಕಾರಿ ಶಕ್ತಿಗಳೊಡನೆ ಸೇರಿಕೊಂಡರೆ ಅದೇನೂ ತಪ್ಪಲ್ಲ. ನಾಗರೀಕ ಹಕ್ಕುಗಳನ್ನು ರಕ್ಷಿಸಲು, ದೇಶದ ಸಾರ್ವಭೌಮತ್ವವನ್ನೇ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಮಾರಾಟ ಮಾಡಲು ಹೊರಟ ಇಂದಿರಾ ಕಾಂಗ್ರೆಸ್ಸಿನ ಸರಕಾರವನ್ನೆದುರಿಸಲು ಒಪ್ಪಿಕೊಂಡಿರುವ ಪಕ್ಷಗಳೆಲ್ಲ ಒಂದಾದಾಗ ಅದು ವಿಧ್ವಂಸಕ ಉದ್ದೇಶವಾಗುತ್ತದೆ. ಇಂದಿರಾ ಕಾಂಗ್ರೆಸ್ಸಿನ ದೃಷ್ಟಿಯಲ್ಲಿ ದೇಶದ ಸಾರ್ವಭೌಮತ್ವದ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ಕಾರ್ಯ ವಿಧ್ವಂಸಕ ಕೃತಿಯಾದರೆ, ಅದು ದೇಶಪ್ರೇಮಿಗಳ ಮಹಾಕಾರ್ಯವಲ್ಲದೆ ಮತ್ತೇನಲ್ಲವೆಂಬುದನ್ನು 19ರ ಘಟನೆ ತೋರಿಸಿಕೊಟ್ಟಿದೆ. ತನ್ನ ಪಕ್ಷದ ಕೇಂದ್ರ-ರಾಜ್ಯ ಸರಕಾರಗಳೂ, ತನ್ನ ಪಕ್ಷದ ಲೋಕಸಭೆ, ವಿಧಾನಸಭೆ ಸದಸ್ಯರೂ, ಪಾರ್ಟಿ ಮುಖಂಡರೂ 19ರ ಸಾರ್ವತ್ರಿಕ ಮುಷ್ಕರವನ್ನು ವಿಫಲಗೊಳಿಸಲು ಅಸಮರ್ಥರಾಗಿರುವುದನ್ನು ಕಂಡೇ, ರೇಡಿಯೋಗಳ ಮೂಲಕ ಕಿರಿಚಿಕೊಳ್ಳಲಾಯಿತು ಸಾರ್ವತ್ರಿಕ ಮುಷ್ಕರ ವಿಫಲಗೊಂಡಿದೆಂದು. ಆದರೆ ಜೈಲಿನಲ್ಲಿದ್ದ ನಮಗೆಲ್ಲ ಗೊತ್ತು ಹಾಗೆಯೇ ಹೊರಗಿನ ಜನರಿಗೂ ಗೊತ್ತು ಬಿಜಾಪುರ ಜಿಲ್ಲೆಯಲ್ಲಿ ಮುಷ್ಕರ ಮತ್ತು ಬಂದ್ ಎಷ್ಟು ಯಶಸ್ವಿಯಾಗಿದೆಯೆಂದರೆ. ವಿರೋಧಿ ಪಕ್ಷಗಳ, ಕಾರ್ಮಿಕ ಸಂಘಟನೆಗಳ ಐಕ್ಯತೆ, ಎಂಥ ತ್ಯಾಗ-ಬಲಿದಾನಕ್ಕೂ ತಾವು ಸಿದ್ಧರೆಂಬ ಕಾರ್ಮಿಕವರ್ಗದ ದೃಢ ನಿರ್ಧಾರವೇ ಸರಕಾರದಲ್ಲಿ ನಡುಕ ಉಂಟುಮಾಡಿದೆ.

ಕಲಿಯತಕ್ಕ ಪಾಠ

ತಾವೆದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಮಿಕರೂ, ಇಡೀ ಜನತೆ ಹೋರಾಡಲು ತಯಾರಿದ್ದಾರೆಂಬ ಸಂಗತಿ 19ರ ಸಾರ್ವತ್ರಿಕ ಮುಷ್ಕರ ತೋರಿಸಿಕೊಟ್ಟಿದೆ. ಆದರೆ ರಾಷ್ಟ್ರೀಯ ಹೋರಾಟ ಸಮಿತಿಯಲ್ಲಿರುವ ಕೆಲವು ಘಟಕಗಳು, ಕೇಂದ್ರ-ರಾಜ್ಯ ನೌಕರರ ಫೆಡರೇಷನ್, ಎಚ್.ಎಂ.ಎಸ್., ಬಿ.ಎಂ.ಎಸ್.ಗಳಂಥವು ತಮ್ಮ ಅಂಗಸಂಸ್ಥೆಗಳು ನಿರ್ಣಯಿಂತ ನಿಲುವೆಯಂತೆ ವರ್ತಿಸುವಂತೆ ಮಾಡುವಲ್ಲಿ ವಿಫಲಗೊಂಡಿವೆ. ಬ್ಯಾಂಕ್, ಎಲ್.ಐ.ಸಿ. ಮೊದಲಾದ ಅಖಿಲ ಭಾರತ ಮಟ್ಟದ ಫೆಡರೇಶನ್‌ಗಳು ತಮ್ಮ ನಿರ್ಧಾರ ತೋರ್ಪಡಿಸಿವೆ. ಆದರೆ ರೇಲ್ವೆ, ಟ್ರಾನ್ಸ್‌ಪೋರ್ಟ್, ಪೋಸ್ಟ್-ಟೆಲಿಗ್ರಾಫ್ ಮುಂತಾದ ಕಾರ್ಮಿಕರೆಲ್ಲ ಬರೇ ಪ್ರತಿಭಟನಾ ದಿನವನ್ನಷ್ಟೇ ಆಚರಿಸದೆ, ಇತರ ಕಾರ್ಮಿಕ ವರ್ಗದ ಜೊತೆಯಲ್ಲಿ ಹೋರಾಟದಲ್ಲಿ ಪಾಲ್ಗೊಳ್ಳುವಂತಾಗಬೇಕು. ಬಿಜಾಪುರದಲ್ಲಿ, ವಿದ್ಯಾರ್ಥಿಗಳಲ್ಲದೆ, ರೈತರೂ ಕೂಡ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾಗಿರುವ ಸಂಗತಿ, ರೈತ ವರ್ಗವನ್ನು ಇನ್ನೂ ಹೆಚ್ಚು ಸಂಘಟಿಸಿ ಇಂಥ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಅತ್ಯಗತ್ಯ. ಹಾಗಾದರೆ ಮಾತ್ರ ರೈತ-ಕಾರ್ಮಿಕರ ಐಕ್ಯತೆಯನ್ನು ಬಲಗೊಳಿಸಿ ಇಂದಿರಾ ಕಾಂಗ್ರೆಸ್ ಸರಕಾರದ ಪತನಕ್ಕೆ ಬೇಕಾದ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಭದ್ರಗೊಳಿಸಲು ಶಕ್ಯವಾಗುತ್ತದೆ. ಹೋರಾಟದ ಮೂಲಕವೇ ರೈತ-ಕಾರ್ಮಿಕರ ಐಕ್ಯತೆಗೆ ಬೆಸುಗೆ ಹಾಕಿ ಅದು ನಿರಂತರವಾಗಲಿದು ಗುತ್ತೇದಾರಿ-ಬಂಡವಾಳದಾರ-ಭೂಮಾಲಕವರ್ಗದ ಇಂದಿರಾ ಸರಕಾರವನ್ನು ಸೋಲಿಸಿ, ಎಡ ಪ್ರಜಾಪ್ರಭುತ್ವ ರಂಗದ ಸರಕಾರ ರಚಿಸಿ, ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ನಾಂದಿ ಹಾಕಬಹುದು. ಮನಸ್ಸು ಮಾಡಿದರೆ, ಕೆಲವು ಸಂಕುಚಿತ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಹೋರಾಟಕ್ಕಿಳಿದರೆ, ಮೂಲಭೂತ ಸಿದ್ಧಾಂತಗಳು ಅಡ್ಡಿಬಾರದೆ, ಜನರ ಬೆಂಬಲದಿಂದ ಬಲಿಷ್ಠವಾದ ಐಕ್ಯ ಹೋರಾಟ ನಡೆಸಲು ಸಾಧ್ಯವೆಂಬುದನ್ನು 10ರ ಮಹಾ ಮುಷ್ಕರ ತೋರಿಸಿಕೊಟ್ಟಿದೆ. ಈ ಅನುಭವವನ್ನರಿತುಕೊಂಡು ಹೋರಾಟ ಮುಂದುವರಿಸೋಣ.

ಸುಂದತ್ತಾ ಕಾರ್ಮಿಕರ ಹೋರಾಟ

ತುಟ್ಟಿಭತ್ಯದ ನಿರ್ಧಾರದ ಕೇಳಿಕೆಗಾಗಿ ಹುಬ್ಬಳ್ಳಿಯ ಸುಂದತ್ತಾ ಆಯಿಲ್ ಮಿಲ್ಸಿನ 605 ಕಾರ್ಮಿಕರು 21-12-81 ರಿಂದ ಮುಷ್ಕರ ಹೂಡಿದ್ದಾರೆ. 1981ರ ಸೆಪ್ಟೆಂಬರ್ 1ರ ಒಪ್ಪಂದದ ಶರತ್ತುಗಳನ್ನು ಪೂರ್ತಿಗೊಳಿಸುವುದಿಲ್ಲವೆಂಬ ಆಡಳಿತ ವರ್ಗದ ಹಠಮಾರಿತನದ ಫಲವಾಗಿ ಈ ಮುಷ್ಕರ ಆರಂಭವಾಯಿತು. ಆ ಒಪ್ಪಂದದನುಸಾರವಾಗಿ ಕಾರ್ಮಿಕರಿಗೆ ರೂ. 43/- ಪ್ರತಿ ತಿಂಗಳ ಹೆಚ್ಚಳವಾಯಿತು ಹಾಗೂ 30-11-81 ರೊಳಗೆ ಅಂತಿಮ ಒಪ್ಪಂದವೊಂದಕ್ಕೆ ಸಹಿ ಹಾಕಬೇಕಾಗಿತ್ತು. ಮತ್ತೆ ರೂ. 15/- ತುಟ್ಟಿಭತ್ಯ ಹೆಚ್ಚಳ ಕೊಡುವುದಾಗಿ ಆಡಳಿತವರ್ಗ ಹೇಳಿತ್ತು. ಆಗಲೂ ಕಾರ್ಮಿಕರ ಒಟ್ಟು

(7ನೇ ಪುಟ ನೋಡಿ)

ಪ. ಬಂಗಾಳದಲ್ಲಿ ಅವಧಿಗಿಂತ ಮುಂಚಿತವಾಗಿ ಚುನಾವಣೆ ನಡೆಸುವುದು ನ್ಯಾಯಸಮ್ಮತವಾಗಿದೆ

—ರಾಂ

ಪ. ಬಂಗಾಳದ ಎಡರಂಗ ಸರಕಾರವು ತನ್ನ ಐದು ವರ್ಷಗಳ ಅಧಿಕಾರಾವಧಿ ಮುಗಿಯುವ ಮೂರು ತಿಂಗಳ ಮುಂಚಿತವಾಗಿ, ಅಂದರೆ ಮಾರ್ಚ್ 15, 1982ರ ಒಳಗಾಗಿ ರಾಜ್ಯ ವಿಧಾನಸಭೆಗೆ ಚುನಾವಣೆ ಮಾಡಬೇಕೆಂದು ಚುನಾವಣಾ ಕಮಿಷನನ್ನು ಕೇಳಿಕೊಂಡದ್ದು ಸಂವಿಧಾನಾತ್ಮಕವೂ ನ್ಯಾಯಸಮ್ಮತವೂ ಆಗಿದೆ. ರಾಜ್ಯದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಮೂರು ತಿಂಗಳ ಮುಂಚಿತವಾಗಿ ಚುನಾವಣೆ ನಡೆಸಲು ಸಕಾರಣವನ್ನೂ ಕೊಟ್ಟಿದ್ದಾರೆ. ಮಾರ್ಚ್ ತಿಂಗಳ ನಂತರ ಸೆಗಾಲದ ಉರಿಬಿಸಿಲಿನಲ್ಲಿ ರಾಜಕೀಯ ಪಕ್ಷಗಳಿಗೆ ಚುನಾವಣಾ ಪ್ರಚಾರ ಮಾಡಲಿಕ್ಕೂ, ಮತದಾರರಿಗೆ ಮತ ಚಲಾಯಿಸಲಿಕ್ಕೂ ತುಂಬಾ ಅನಾನುಕೂಲವಾಗುವುದು. ಈ ಕಾರಣವನ್ನು ಎಲ್ಲರೂ ಒಪ್ಪಬೇಕಾದುದೇ. ಮುಂಚಿತವಾಗಿ ಚುನಾವಣೆ ನಡೆಸಬೇಕೆಂಬ ಎಡರಂಗ ಸರಕಾರದ ಸೂಚನೆಯನ್ನು ಹಿಂದೂಸ್ತಾನ್ ಟೈಮ್ಸ್ ತನ್ನ ಸಂಪಾದಕೀಯದಲ್ಲಿ ಬೆಂಬಲಿಸಿದೆ. ಈ ಪತ್ರಿಕೆ ಎಡರಂಗದ ಪರವಾಗಿಯೂ ಇಲ್ಲ, ಸಿ. ಪಿ. ಐ. (ಎಂ)ನ ಪರವಾಗಿಯೂ ಇಲ್ಲ. ಸಂವಿಧಾನದಲ್ಲಿ ನಮೂದಿಸಿದಂತೆ, ಚುನಾವಣಾ ಕಮೀಷನ್ ವಿಧಾನಸಭೆಯ ಅವಧಿ ಮುಗಿಯುವ ಆರು ತಿಂಗಳ ಮುಂಚಿತವಾಗಿ ಹೊಸ ಚುನಾವಣೆ ನಡೆಸಬಹುದೆಂದು ಈ ಪತ್ರಿಕೆ ಪ್ರತಿಪಾದಿಸಿದೆ. ರಾಷ್ಟ್ರದ ಇತರ ಕೆಲವು ಬೂರ್ಜ್ವಾ ಪತ್ರಿಕೆಗಳೂ, ಪಕ್ಷಗಳೂ ಪ. ಬಂಗಾಳದಲ್ಲಿ ಮೂರು ತಿಂಗಳ ಮುಂಚಿತವಾಗಿ ಚುನಾವಣೆ ನಡೆಸುವುದು ನ್ಯಾಯಸಮ್ಮತವೆಂದು ಅಭಿಪ್ರಾಯಪಟ್ಟಿವೆ.

ನಾಲ್ಕನೇ ಲೋಕಸಭೆಯನ್ನು ಅವಧಿ ಮುಗಿಯುವ ಮುಂಚಿತವಾಗಿಯೇ ಪ್ರಧಾನಿ ಇಂದಿರಾಗಾಂಧಿಯ ಸಲಹೆಯಂತೆ ರಾಷ್ಟ್ರಾಧ್ಯಕ್ಷ ಗಿರಿ ಜನವರಿ 1971ರಲ್ಲಿ ವಿಸರ್ಜಿಸಿದುದು ಒಂದು ಅತ್ಯುತ್ತಮ ನಿದರ್ಶನ. ಅನಂತರ 1977ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ, ಪುನಃ 1980ರಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದನಂತರ ಹಲವು ರಾಜ್ಯ ವಿಧಾನಸಭೆಗಳನ್ನು ಕೇವಲ ರಾಜಕೀಯ ಉದ್ದೇಶದಿಂದ ಅವಧಿ ಮುಗಿಯುವ ಮುಂಚೆಯೇ ವಿಸರ್ಜಿಸಿದುದು ಎಲ್ಲರ ನೆನಪಿನಲ್ಲಿದೆ. ಅವಧಿ ಮುಂಚೆಯೇ ರಾಜ್ಯ ವಿಧಾನಸಭೆಗಳನ್ನು ವಿಸರ್ಜಿಸಿ ಮರುಚುನಾವಣೆಯನ್ನು ನಡೆಸುವುದು ಸಂವಿಧಾನಾತ್ಮಕವೆಂದು ಸುಪ್ರೀಂಕೋರ್ಟು ಕೂಡಾ ತೀರ್ಮಾನಿಸಿದೆ. ಚುನಾವಣಾ ಕಮಿಷನ್ ಕೂಡಾ ಸರಕಾರದ, ಮಂತ್ರಿಮಂಡಳಿಯ ಈ ಅಧಿಕಾರವನ್ನು ಗೌರವಿಸಿದೆ. ಕಾರಣ, ಸರಕಾರ, ಮಂತ್ರಿಮಂಡಳ ಚುನಾಯಿತ ಪ್ರತಿನಿಧಿಗಳಿರುವ ಸಂಸತ್ತಿಗೆ ಜವಾಬ್ದಾರಿಯಾಗಿರುವುದರಿಂದ ಅವಧಿಯ ಮೊದಲೇ ಸಂಸತ್ತನ್ನು ವಿಸರ್ಜಿಸಲು ಅದಕ್ಕೆ ಅಧಿಕಾರ ಇದ್ದೇ ಇರುವುದು.

ಈ ಪ್ರಶ್ನೆ 1956–57ರಲ್ಲಿಯೇ ಇತ್ಯರ್ಥವಾಗಿತ್ತು. ಆಗ ಬಂಗಾಳ ಮತ್ತು ಮೈಸೂರು (ಈಗಿನ ಕರ್ನಾಟಕ) ರಾಜ್ಯ ವಿಧಾನಸಭೆಗಳನ್ನು ಅವಧಿ ಮುಗಿಯುವ ಎರಡುವರೆ ತಿಂಗಳುಗಳ ಮುಂಚಿತವಾಗಿಯೇ ವಿಸರ್ಜಿಸಲಾಗಿತ್ತು. ಬಿಹಾರ, ಮುಂಬಯಿ, ಮದ್ರಾಸ್, ಪಂಜಾಬ್, ಉ. ಪ್ರದೇಶ ವಿಧಾನಸಭೆಗಳನ್ನೂ ಅದೇ ವರ್ಷ ಅವಧಿ ಮುಗಿಯುವ ಒಂದು ತಿಂಗಳ ಮುಂಚಿತವಾಗಿ ವಿಸರ್ಜಿಸಲಾಗಿತ್ತು. ಚುನಾವಣಾ ಕಮಿಷನ್‌ನ ವರದಿಯಂತೆ, ಹಾಗೆ ಮಾಡಲು ಮುಂದಿನ ಚುನಾವಣೆಗಳಿಗೆ ಅನುಕೂಲಕರವಾದ ಹವಾಮಾನವನ್ನು ಪಡೆಯುವುದೇ ಕಾರಣವಾಗಿತ್ತು. ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆ ಮಾಡಲು ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳನ್ನು ಬಿಟ್ಟರೆ ಬೇರೆ ಯಾವ ತಿಂಗಳೂ ಅನುಕೂಲವಾಗಲಾರದೆಂದು ವರದಿ ತಿಳಿಸುವುದು. ಸೆಕೆಗಾಲ, ಮಳೆಗಾಲ, ಚಳಿಗಾಲ, ಬಿತ್ತನೆ-ಕೊಯಿಲುಗಾಲಗಳಲ್ಲಿ ಚುನಾವಣೆ ನಡೆಸಿದರೆ ಮತದಾರರಿಗೂ ರಾಜಕೀಯ ಪಕ್ಷಗಳಿಗೂ ಸಕ್ರಿಯವಾಗಿ ಭಾಗವಹಿಸಲು ಕಷ್ಟವಾಗುವುದು. ಈ ಎಲ್ಲಾ ಹಿನ್ನೆಲೆಗಳಿಂದ ಪ. ಬಂಗಾಳದಲ್ಲಿ ಸೆಕೆಗಾಲ–ಮಳೆಗಾಲ ಪ್ರಾರಂಭವಾಗುವ ಮುಂಚೆ, ಮಾರ್ಚ್ 15ರ ಒಳಗಾಗಿ ಚುನಾವಣೆ ನಡೆಸಬೇಕೆಂದು ಎಡರಂಗ ಸರಕಾರವು ಚುನಾವಣಾ ಕಮೀಷನ್‌ನ್ನು ಕೇಳಿಕೊಂಡಿರುವುದು ನ್ಯಾಯಸಮ್ಮತವೇ ಆಗಿದೆ.

ಆದರೆ, ಈಗ ನಾಲ್ಕು ವರ್ಷಗಳಿಂದ ಅವ್ಯವಸ್ಥೆಗೊಂಡಿರುವ ಮತ್ತು ಗುಂಪುಗಾರಿಕೆ ಹಾಗೂ ಒಳ ಪೈಪೋಟಿಗಳಿಂದ ಶಿಥಿಲವಾಗಿರುವ ಇಂದಿರಾ ಕಾಂಗ್ರೆಸ್ ಮುಂಬರುವ ರಾಜ್ಯ ವಿಧಾನಸಭೆಯ ಚುನಾವಣೆಯನ್ನು ಎದುರಿಸಲು ಸಿದ್ಧವಾಗಿಲ್ಲ. ಮುಂದಿನ ಚುನಾವಣೆಯಲ್ಲಿಯೂ ಪ. ಬಂಗಾಳದಲ್ಲಿ ಎಡರಂಗವೇ ಅತ್ಯಧಿಕ ಬಹುಮತ ಪಡೆದು ಮತ್ತೆ ಅಧಿಕಾರಕ್ಕೆ ಬರುವುದೆಂಬ ಭೀತಿ ಇಂದಿರಾ ಕಾಂಗ್ರೆಸ್‌ಗಿದೆ. ಪ ಬಂಗಾಳದ ಚುನಾವಣೆಯು ಎಡರಂಗದ ಪರವಾಗಿ ಹೋದರೆ, ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಸದ್ಯದಲ್ಲಿಯೇ ನಡೆಯಲಿರುವ ವಿಧಾನಸಭೆಗಳ ಚುನಾವಣೆಗಳಿಗೆ ಅಹಿತಕಾರಿ ಪ್ರಭಾವ ಬೀರಬಹುದೆಂಬ ಭಯವೂ ಇದೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಗುಂಡೂರಾವ್ ಅವಧಿಗಿಂತ ಮುಂಚಿತವಾಗಿಯೇ ವಿಧಾನಸಭೆಗೆ ಚುನಾವಣೆ ನಡೆಯಲಿರುವುದೆಂದು ಘೋಷಿಸಿದ್ದಾರೆ. ಪ. ಬಂಗಾಳದಲ್ಲಿ ಈ ರಾಜ್ಯಗಳ ಚುನಾವಣೆಗಳಿಗಿಂತ ಮೊದಲೇ ಚುನಾವಣೆ ನಡೆದು ಎಡರಂಗ ಸರಕಾರವೇ ಅಧಿಕಾರಕ್ಕೆ ಬಂದರೆ, ಹರಿಯಾಣದಲ್ಲಿ ವಿರೋಧ ಪಕ್ಷಗಳ ಐಕ್ಯತೆಯಿಂದ ಇಂದಿರಾ ಕಾಂಗ್ರೆಸ್ ಸೋತರೆ, ಕೇಂದ್ರ ಸರಕಾರದ ಮತ್ತು ಕಾಂಗ್ರೆಸ್ (ಐ)ಯ ಇತರ ರಾಜ್ಯ ಸರಕಾರಗಳ ಬುಡ ನಡುಗಬಹುದೆಂದು ಭೀತಿ ತುಂಬಿದೆ. ಇತ್ತೀಚೆಗೆ ನಡೆದ ಲೋಕಸಭೆಯ ಹಾಗೂ ರಾಜ್ಯ ವಿಧಾನಸಭೆಗಳ ಕೆಲವು ಸ್ಥಾನಗಳಿಗೆ ನಡೆದ ಉಪ ಚುನಾವಣೆಗಳಲ್ಲಿಯೂ, ಆಂಧ್ರಪ್ರದೇಶ ಮತ್ತು ಪ. ಬಂಗಾಳದಲ್ಲಿ ನಡೆದ ಪಂಚಾಯತು ಚುನಾವಣೆಗಳಲ್ಲಿಯೂ, ತ್ರಿಪುರಾದಲ್ಲಿ ಗುಡ್ಡಗಾಡು ಜನರೇ ಅಧಿಕವಾಗಿರುವ ಸ್ವಾಯತ್ತ ತೆಗೆ ಜಿಲ್ಲೆಯ ಆಡಳಿತ ಮಂಡಳಿಗೆ ನಡೆದ ಚುನಾವಣೆಗಳಲ್ಲಿಯೂ ಇಂದಿರಾ ಕಾಂಗ್ರೆಸ್ ತನ್ನ ಜನಪ್ರಿಯತೆಯನ್ನು ಈಗಾಗಲೇ ಕಳೆದುಕೊಂಡಿದೆ.

ಇಂದಿರಾ ಕಾಂಗ್ರೆಸ್ ಈಗ ಚುನಾವಣೆಗೆ ಹೆದರುತ್ತಿದೆ. ಘರೆವಾಲ್ ಲೋಕಸಭೆಯ ಸ್ಥಾನಕ್ಕೆ ನಡೆಯಬೇಕಾದ ಉಪಚುನಾವಣೆಯನ್ನು ಮೂರು–ನಾಲ್ಕು ಬಾರಿ ಮುಂದೂಡಿತು. ಅಸ್ಸಾಂ ಮತ್ತು ಕೇರಳ ರಾಜ್ಯಗಳಲ್ಲಿ ಅಲ್ಪಮತವಿರುವ ತನ್ನ ಪಕ್ಷದ ಸರಕಾರಗಳನ್ನು ಸ್ಥಾಪಿಸಿದೆ. ಈ ರಾಜ್ಯಗಳಲ್ಲಿ ಇಷ್ಟರಲ್ಲಿಯೇ ಮರುಚುನಾವಣೆಯಾಗಬೇಕಿತ್ತು. ಆದರೆ, ಪುನಃ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಭರವಸೆ ಇಲ್ಲದೇ ಇದ್ದುದರಿಂದ ತನ್ನ ಪಕ್ಷದ ಪಕ್ಷಪಾತಿ ರಾಜ್ಯಪಾಲರುಗಳ ನೆರವಿನಿಂದ ಅಕ್ರಮವಾಗಿ ಅಧಿಕಾರ ಹಿಡಿದುಕೊಂಡಿದೆ. ಪ. ಬಂಗಾಳದಲ್ಲಿಯೂ ಚುನಾವಣೆಯನ್ನು ಆದಷ್ಟು ಮುಂದೆ ಹಾಕಿ, ಎಡರಂಗ ಸರಕಾರದ ಅಧಿಕಾರಾವಧಿ ಮುಗಿದ ನಂತರ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಅಲ್ಲಿನ ಜನರ ಮೇಲೆ ಹೇರಿ, ಮುಂದೆ ಇಂದಿರಾ ಕಾಂಗ್ರೆಸ್‌ಗೆ ಅನುಕೂಲವಾಗುವ ಸಮಯದಲ್ಲಿ ಚುನಾವಣೆ ನಡೆಸಿ ಅಧಿಕಾರಕ್ಕೆ ಬರುವ ಪಿತೂರಿ ನಡೆಸುತ್ತಿದೆ. ಅದಕ್ಕಾಗಿ ಪ. ಬಂಗಾಳದ ಲೋಕಸಭೆಯ ಯಾವೊಂದು ಸ್ಥಾನದಲ್ಲಿಯೂ ಗೆದ್ದು ಬರಲು ಸಾಧ್ಯವಾಗದ ಪ್ರಣಬ ಮುಖರ್ಜಿಯನ್ನು (ಇವರು ಗುಜರಾತ್ ರಾಜ್ಯದ ಲೋಕಸಭಾ ಸ್ಥಾನದಿಂದ ಆರಿಸಿಬಂದವರು!) ಹಣಕಾಸು ಖಾತೆಯ ಕ್ಯಾಬಿನೆಟ್ ಮಂತ್ರಿಯನ್ನಾಗಿ ನೇಮಿಸಿದ್ದ ಪ್ರಧಾನಿ ಇಂದಿರಾಗಾಂಧಿ, ಮಂತ್ರಿ ಘನಿಖಾನ್ ಚೌಧುರಿ (ಕಲ್ಲಿದ್ದಲು ಅಕ್ರಮ ವಿತರಣೆಯಲ್ಲಿ ಸಿಕ್ಕಿಬಿದ್ದ ಮಂತ್ರಿ- ಎಡರಂಗ ಸರಕಾರವನ್ನು ಬಂಗಾಳ ಕೊಲ್ಲಿಗೆ ಎಸೆದುಬಿಡಬೇಕೆಂಬ ಮಂತ್ರಿ!), ಪ್ರಣಬ ಮುಖರ್ಜಿ, ಇತ್ಯಾದಿ ಕಾಂಗ್ರೆಸ್ (ಐ) ನಾಯಕರು ಪ. ಬಂಗಾಳದಲ್ಲಿ ಕಾನೂನು ಶಿಸ್ತು ಭಂಗವಾಗಿದೆ, ಹಣಕಾಸು ಅಶಿಸ್ತು ಇದೆ, ಮತದಾರರ ಪಟ್ಟಿಯಲ್ಲಿ ತಪ್ಪುಗಳಾಗಿವೆ, ಎಂದೆಲ್ಲಾ ಅಪಾದಿಸುತ್ತಾ ಈ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಹೇರಲು ಪೂರ್ವಸನ್ನಾಹ ನಡೆಸುತ್ತಿದ್ದಾರೆ. ಅದಕ್ಕೆ ಸರಿಯಾಗಿ, ಈ ರಾಜ್ಯದ ಹಿಂದಿನ ರಾಜ್ಯಪಾಲರಾದ ಕೆ. ಪಿ. ಎಸ್. ಸಿಂಘರನ್ನು ಇನ್ನೊಂದು ರಾಜ್ಯಕ್ಕೆ ವರ್ಗಾಯಿಸಿ ಇಂದಿರಾ ಕಾಂಗ್ರೆಸ್ ಪಕ್ಷಪಾತಿ ಬಿ. ಡಿ. ಪಾಂಡೆಯನ್ನು ಹೊಸತಾಗಿ ರಾಜ್ಯಪಾಲರನ್ನಾಗಿ ನೇಮಿಸಿರುವುದು. ದುಡಿಯುವ ಜನರ-ಪರವಾಗಿರುವ ಒಂದು ರಾಜ್ಯ ಸರಕಾರವನ್ನು ಉರುಳಿಸಲು ಎಷ್ಟೆಲ್ಲಾ ಪಿತೂರಿಗಳು!

ಪ. ಬಂಗಾಳದ ಮತದಾರರ ಪಟ್ಟಿಯು ಸರಿಯಿಲ್ಲ ಎಂಬ ಅಪಾದನೆ ಎಷ್ಟು ಸತ್ಯ? ಮತದಾರರ ಪಟ್ಟಿಯನ್ನು ಆಗಾಗ ಪರಿಷ್ಕರಿಸುವ ಕುರಿತು ಚುನಾವಣಾ ಕಮೀಷನ್‌ನ ಕೆಲವು ತೀರ್ಮಾನಗಳು ಬಹಳ ಕುತೂಹಲಕಾರಿಯಾಗಿವೆ. ತಪ್ಪುಗಳೇ ಇಲ್ಲದ ಮತದಾರರ ಪಟ್ಟಿ ತಯಾರಿಸಲು ಅಸಾಧ್ಯ. ಅಲ್ಪಸ್ವಲ್ಪ ತಪ್ಪುಗಳಿರುವುದು ಸಹಜ. ಚುನಾವಣಾ ಕಮೀಷನ್‌ನ ಕಚೇರಿಗಳು, ರಾಜಕೀಯ ಪಕ್ಷಗಳು, ನಾಗರಿಕರು ಮತದಾರರ ಪಟ್ಟಿಯನ್ನು ಪರಿಷ್ಕರಿಸಿ ಸರಿಪಡಿಸಲು ಸಹಕರಿಸಬೇಕು. ಮತದಾರರ ಪಟ್ಟಿಯನ್ನು ಕಾಲಕಾಲಕ್ಕೆ ಒಟ್ಟಾರೆ ಪರಿಷ್ಕರಿಸಿದರೆ ಸಾಕು, ಅಗತ್ಯ ಕಂಡ ಪ್ರದೇಶಗಳಲ್ಲಿ ಮಾತ್ರ ಮನೆಮನೆಗಳಿಗೆ ಹೋಗಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಬಹುದೆಂದು 1962ರ ಸಾರ್ವತ್ರಿಕ ಚುನಾವಣೆಯ ನಂತರ ಚುನಾವಣಾ ಕಮಿಷನ್ ತೀರ್ಮಾನಿಸಿದೆ. ಪ್ರತಿವರ್ಷವೂ ಮತದಾರರ ಪಟ್ಟಿಯನ್ನು ಪರಿಷ್ಕರಿಸಬೇಕಾಗಿಲ್ಲ. ಚುನಾವಣೆಯ ಮುಂಚೆ ಮೂರು ತಿಂಗಳುಗಳ ಅವಧಿಯಲ್ಲಿ ಮನೆಮನೆಗೆ ಹೋಗಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ ಯಾವುದೇ ಕ್ಷೇತ್ರದಲ್ಲಿ ಮತದಾನ ನಡೆಸಬಹುದು ಎಂದು ನಾಲ್ಕನೇ ಸಾರ್ವತ್ರಿಕ ಚುನಾವಣೆಯ ನಂತರ ತೀರ್ಮಾನಿಸಿದೆ. ದೆಹಲಿ ಹೈಕೋರ್ಟಿನ ತಾ॥ 1-2-80ರ ತೀರ್ಮಾನದಂತೆ ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದು ಕಡ್ಡಾಯವೇನಲ್ಲ; ಅಗತ್ಯವೂ ಅಲ್ಲ. ಆ ಕೆಲಸ ಹಣ, ಸಮಯ, ಸಂದರ್ಭಗಳ ಅನುಕೂಲತೆಗಳಿಗನುಗುಣವಾಗಿ ಚುನಾವಣಾ ಆಯೋಗ ಕಾಲಕಾಲಕ್ಕೆ ಕೈಕೊಳ್ಳಬಹುದು. ಪ್ರತೀ ವರ್ಷ ಪರಿಷ್ಕರಿಸಬೇಕಾಗಿಲ್ಲ. ವರ್ಷದ ಮೊದಲ ತಾರೀಕಿನಂದು ಪ್ರಾಯಕ್ಕೆ ಬಂದವರನ್ನೆಲ್ಲಾ ಮತದಾರರ ಪಟ್ಟಿಗೆ ಸೇರಿಸಲೇಬೇಕೆಂದಿಲ್ಲ. ಕಾರಣಾಂತರಗಳಿಂದ ಕೆಲವರ ಹೆಸರುಗಳು ಬಿಟ್ಟು ಹೋಗಲೂ ಬಹುದು.

ಕಾನೂನು ಹೀಗಿರುತ್ತಾ, ಪಶ್ಚಿಮ ಬಂಗಾಳದಲ್ಲಿ 14 ವರ್ಷಗಳ ನಂತರ 1979ರಲ್ಲಿ ಆಮೂಲಾಗ್ರವಾಗಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗಿತ್ತು. ಪುನಃ 1-4-81ರಿಂದ ಆಮೂಲಾಗ್ರವಾಗಿ ಪರಿಷ್ಕರಣೆಯ ಕೆಲಸ ಪ್ರಾರಂಭವಾಗಿತ್ತು. ಅಕ್ಟೋಬರ್ 81ರ ಒಳಗಾಗಿ ಸಂಬಂಧಪಟ್ಟವರು ತಮ್ಮ ತಕರಾರುಗಳನ್ನು ಚುನಾವಣಾ ಸಮಿತಿಗೆ ತಿಳಿಸಬಹುದಿತ್ತು. ಪರಿಷ್ಕೃತ ಮತದಾರರ ಪಟ್ಟಿಯನ್ನು ತಾ॥ 1-1-82ರಲ್ಲಿ ಪ್ರಕಟಿಸಲಾಯಿತು. ಪರಿಷ್ಕೃತ ಮತದಾರರ ಪಟ್ಟಿಯ ಎರಡು ಪ್ರತಿಗಳನ್ನು ಪ್ರತೀ ಕ್ಷೇತ್ರದ ಅಧಿಕೃತ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಕೊಡಲಾಗಿತ್ತು. ಆದರೆ, ತಕರಾರುಗಳು ಏನಿದ್ದರೂ ಸಮಯಕ್ಕೆ ಸರಿಯಾಗಿ ಬರಲೇ ಇಲ್ಲ. ಈಗ ಮತದಾರರ ಪಟ್ಟಿ ಸರಿಯಿಲ್ಲ, ಬಹಳ ತಪ್ಪುಗಳಿವೆ ಎಂದು ಪ. ಬಂಗಾಳದ ಇಂದಿರಾ ಕಾಂಗ್ರೆಸ್ಸಿಗರು ಗುಲ್ಲೆಬ್ಬಿಸುತ್ತಿದ್ದಾರೆ. ಚುನಾವಣೆ ಎದುರಿಸಲಾರದ ಇತರ ವಿರೋಧ ಪಕ್ಷಗಳೂ (ಜನತಾ, ಲೋಕದಳ, ಕಾಂಗ್ರೆಸ್ (ಎಸ್) ಈ ಕುರಿತು ತಮ್ಮ ಅಪಸ್ವರ ಎತ್ತುತ್ತಿವೆ. ದುರದೃಷ್ಟದಿಂದ 1-2-81ರಂದು ಪ್ರಕಟಿಸಬೇಕಾದ ಅಂತಿಮವಾಗಿ ಪರಿಷ್ಕೃತವಾದ ಮತದಾರರ ಪಟ್ಟಿಯನ್ನು ಇನ್ನೂ ಪ್ರಕಟಿಸಲೇ ಇಲ್ಲ. ಪ್ರಕಟಣೆಯ ದಿನವನ್ನು ಮುಂದೂಡಲಾಗಿದೆ! ಮುಖ್ಯ ಚುನಾವಣಾ ಕಮಿಷನರ್ ಎಸ್. ಎಲ್. ಶಕದರ್ ಮತ್ತು ರಾಜ್ಯ ಚುನಾವಣಾ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಮತದಾರರ ಪಟ್ಟಿಯನ್ನು ಪ್ರಕಟಿಸಿ ಮಾರ್ಚ್ 15ರ ಒಳಗೆ ಚುನಾವಣೆ ನಡೆಸುವುದಾಗಿ ಭರವಸೆ ಕೊಡುತ್ತಲೇ ಇದ್ದರು. ಕೊನೆಗೂ ಇಂದಿರಾಗಾಂಧಿಯ ಮತ್ತು ಅವರ ಪಕ್ಷದ ಪ್ರಭಾವಕ್ಕೆ ಮುಖ್ಯ ಚುನಾವಣಾ ಕಮಿಷನರ್ ಒಳಗಾದರೆ?

(7ನೇ ಪುಟ ನೋಡಿ)

ಸುಂದತ್ತಾ ಕಾರ್ಮಿಕರ ಹೋರಾಟ

[5ನೇ ಪುಟದಿಂದ]

ಸಂಬಳ ಕೇವಲ ರೂ. 291/-. ಈ ಕನಿಷ್ಟ ಸಂಬಳವನ್ನಾದರೂ ಇಟ್ಟುಕೊಂಡು ತುಟ್ಟಿಭತ್ಯದ ಸಂಪೂರ್ಣ ಪರಿಹಾರವಾಗಬೇಕೆಂದು ಯೂನಿಯನ್ ಬೇಡಿಕೆಯಿಟ್ಟಿತು. ಒಂದು ಪಾಯಿಂಟಿಗೆ 60ಪೈಸೆಯ ದರದಲ್ಲಿ ಪರಿಹಾರವಿರಬೇಕೆಂದು ಕೇಳಲಾಯಿತು. ಆಡಳಿತವರ್ಗ ಇದಕ್ಕೊಪ್ಪಲಿಲ್ಲ. ಈಗಿನ ಪರಿಹಾರ ದರ ಪಾಯಿಂಟಿಗೆ ಕೇವಲ 9.38 ಪೈಸೆ (1960 ಆಧಾರ ವರ್ಷ). ಕಾರ್ಮಿಕರು ಸಿ.ಐ.ಟಿ.ಯು. ವನ್ನು ಸೇರುವಾಗ ಅವರ ಕನಿಷ್ಟ ವೇತನ ಕೇವಲ ರೂ. 233/-. ಆ ಒಪ್ಪಂದ 31-12-81ರಂದು ಕೊನೆಗೊಳ್ಳಲಿತ್ತು. ಈ ಯಶಸ್ಸಿನಿಂದ ಧೈರ್ಯ ಪಡೆದ ಕಾರ್ಮಿಕರು ಧೀರತನದಿಂದ ಈಗ ಹೋರಾಡುತ್ತಿದ್ದಾರೆ.

ಮುಂಬೈಯಿಂದ ಸಲಹೆ ಪಡೆದಿರುವ ಆಡಳಿತವರ್ಗ ಮುಷ್ಕರ ಮುರಿಯಲು ಪ್ರಯತ್ನಿಸುತ್ತಿದೆ. ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಕಾರ್ಖಾನೆಯಿಂದ 400 ಮೀಟರಿನ ಹೊರಗೆ ಇರುವಂತೆ ಆಡಳಿತವರ್ಗ ಇಂಜಕ್ಷನ್ ಪಡೆದಿದೆ. ಅದನ್ನು ಪೋಲೀಸರು ಕಾನೂನು ಬಾಹಿರವಾಗಿ ಜಾರಿಗೊಳಿಸುತ್ತಿದ್ದಾರೆ.

ಡಿಸೆಂಬರ್ 81ರ ಸಂಬಳ ಕೊಡದೆ ಕಾರ್ಮಿಕರು ಶರಣಾಗತರಾಗುವಂತೆ ಒತ್ತಡ ಹೇರಲಾಗುತ್ತಿದೆ. ಇಂತಹ ಕ್ರಮದಿಂದ ಕಾನೂನು ಕ್ರಮ ಎದುರಿಸಬೇಕಾಗಿ ಬರಬಹುದಾಗಿದ್ದರೂ ಆಡಳಿತವರ್ಗ ಈ ಕೆಲಸ ಮಾಡುತ್ತಿದೆ.

ಮುಂಬೈಯ ನಷ್ಟದಲ್ಲಿ ನಡೆಯುತ್ತಿರುವ ಮಾಡ್ರನ್ ಮಿಲ್ ಲಿಮಿಟೆಡ್‌ನೊಂದಿಗೆ ವಿಲೀನವಾಗುವ ಮೊದಲು ಸುಂದತ್ತಾ ಆಯಿಲ್ ಅಂಡ್ ಫುಡ್ಸ್ ಲಿಮಿಟೆಡ್ ಲಾಭಗಳಿಸುತ್ತಿದ್ದ ಸ್ವತಂತ್ರ ಕಂಪನಿಯಾಗಿತ್ತು. ಕನಿಷ್ಟ ಅಗತ್ಯಕ್ಕಿಂತಲೂ ಕಮ್ಮಿ ಸಂಬಳ ಪಡೆಯುತ್ತಿರುವ 605 ಸುಂದತ್ತಾ ಕಾರ್ಮಿಕರು ವಿಲೀನಗೊಂಡ ಕಂಪೆನಿಯ ವ್ಯವಹಾರದ ಮೂರರಲ್ಲೊಂದು ಪಾಲು ಒಪ್ಪಿಸುತ್ತಿದ್ದಾರೆ. ಈ ಕಾರ್ಮಿಕರಿಗಿಂತ ಹೆಚ್ಚು ವೇತನ ಪಡೆಯುತ್ತಿರುವ ಮಾಡ್ರನ್ ಮಿಲ್ಲಿನ 3[illegible]00 ಕಾರ್ಮಿಕರು ಉಳಿದ ಪಾಲು ಒಪ್ಪಿಸುತ್ತಿದ್ದಾರೆ.

ತಕ್ಷಣ ಸಂಬಳ ಪಾವತಿಮಾಡಬೇಕೆಂದು ಒತ್ತಾಯಿಸಿ ಸುಂದತ್ತಾ ಕಾರ್ಮಿಕರು ಕಾರ್ಖಾನೆಯೊಳಗೆ ಧರಣಿ ಕೂತಿದ್ದರು.

●

ಸರ್ವಸದಸ್ಯರ ಸಭೆ

ರಾಜ್ಯಸರಕಾರವು ಕಳೆದ ಒಂದು ವರ್ಷದಿಂದ ಬೀಡಿಮಜೂರರ ಕನಿಷ್ಠ ವೇತನವನ್ನು ಪರಿಷ್ಕರಿಸುವುದಾಗಿ ಆಶ್ವಾಸನೆ ಕೊಡುತ್ತಾ ಬಂದು ಇದೀಗ ಕನಿಷ್ಠ ವೇತನ ಸಲಹಾ ಸಮಿತಿ ಬಹುಮತದಿಂದ ಶಿಫಾರಸು ಮಾಡಿದ ಪ್ರಕಟನೆಯನ್ನು ಬದಿಗಿಟ್ಟು ಸಾವಿರ ಬೀಡಿ ಕಟ್ಟಿದ್ದಕ್ಕೆ ಕೇವಲ 7ರೂ. 40 ಪೈಸೆ ಎಂದು ಪ್ರಕಟಿಸಿದೆ.

ಸರಕಾರದ ಈ ಕ್ರಮವನ್ನು 25-12-81ರಂದು ನಡೆದ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ನಿನ ಸರ್ವಸದಸ್ಯರ ಸಭೆ ತೀವ್ರವಾಗಿ ಖಂಡಿಸಿದೆ.

ಬೀಡಿ ಮಜೂರರ ಎವರೇಜಿನ ಬಗ್ಗೆ, ಬೀಡಿ ಬ್ರಾಂಚ್ ಮುಚ್ಚಿದ ಬಗ್ಗೆ ಹಾಗೂ ಹಲವಾರು ವಿವಾದಗಳು ವರ್ಷಗಟ್ಟಲೇ ಕಾರ್ಮಿಕ ನ್ಯಾಯಾಲಯದಲ್ಲೂ ಹಾಗೂ ಕಾರ್ಮಿಕ ಅಧಿಕಾರಿಗಳ ಮುಂದೆ ಇನ್ನೂ ಇತ್ಯರ್ಥವಾಗದಿರುವುದರಿಂದ ಕಾರ್ಮಿಕರು ತೊಂದರೆಗೊಳಗಾಗಿದ್ದಾರೆ. ಈ ಕುರಿತೂ ಕ್ರಮಕೈಗೊಳ್ಳಲು ಸಭೆ ತೀರ್ಮಾನಿಸಿತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ದೇವಣ್ಣ ಶೆಟ್ಟಿಗಾರರು ವಹಿಸಿದ್ದರು. ಕಾಂ. ಯು. ಬಿ. ಮಾರಪ್ಪ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಕಾಂ. ಗಂಗಾಧರಗಟ್ಟಿ, ಕೆ. ಈಶ್ವರ, ಶಂಭು, ಕೆ. ಹುಂಜಪ್ಪ ಮತ್ತು ಪಿ. ಶಾಂತಪ್ಪ ಮಾತನಾಡಿದರು.

ಕೊನೆಯಲ್ಲಿ ಕೆ. ನಾರಾಯಣಶೆಟ್ಟಿಯವರು ವಂದಿಸಿದರು.

●

......ಚುನಾವಣೆ ನಡೆಯುವುದು ನ್ಯಾಯಸಮ್ಮತವಾಗಿದೆ

(6ನೇ ಪುಟದಿಂದ)

ಘೆರೆವಾಲ್ ಕ್ಷೇತ್ರದ ಲೋಕಸಭಾ ಸ್ಥಾನದ ಚುನಾವಣೆಯನ್ನು ಇಂತಹ ಕಾರಣದಿಂದಲೇ ಮುಂದೂಡಿರುವುದು ಎಲ್ಲರಿಗೂ ನೆನಪಿದೆ. ಇದೆಂತಹ ಅಪಾಯ ಪ್ರಜಾಪ್ರಭುತ್ವಕ್ಕೆ!

ಪ್ರಜಾಸತ್ತೆ, ಸಮಾಜವಾದ, ಬಡತನ ನಿರ್ಮೂಲನ ಇತ್ಯಾದಿ ಘೋಷಣೆಗಳಿಂದಲೂ, ಆಶ್ವಾಸನೆಗಳಿಂದಲೂ ಬಡಜನರನ್ನು ಮರುಳುಗೊಳಿಸಿ ಅವರನ್ನು ಭೂಮಾಲಕ-ಬಂಡವಾಳಶಾಹಿ ಪ್ರಭುತ್ವದ ವಿರುದ್ಧ ನಡೆಯುತ್ತಿರುವ ಹೋರಾಟದಿಂದ ವಿಮುಖಗೊಳಿಸಲು ಪ್ರಯತ್ನಿಸುತ್ತಿರುವ ಇಂದಿರಾಗಾಂಧಿ ಪಕ್ಷ ಚುನಾವಣೆಗೆ ಹೆದರುತ್ತಿದೆ. ತನ್ನ ಪಕ್ಷದಲ್ಲಿಯೇ ಆಂತರಿಕ ಪ್ರಜಾಪ್ರಭುತ್ವವನ್ನು ಸಾಯಿಸಿದೆ! ಈ ಪಕ್ಷದ ಪ್ರಾದೇಶಿಕ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಮಿತಿಗಳ ಸದಸ್ಯರು, ಪದಾಧಿಕಾರಿಗಳು ಸಂಬಂಧಪಟ್ಟ ಸದಸ್ಯರಿಗೆ, ಪ್ರತಿನಿಧಿಗಳಿಗೆ ಜವಾಬ್ದಾರರಾಗಿರುವ ಬದಲು ಇಂದಿರಾಗಾಂಧಿ - ರಾಜೀವಗಾಂಧಿಗೇ ನೇರವಾಗಿ ಜವಾಬ್ದಾರರಾಗಿರುತ್ತಾರೆ. ಕಾರಣ ಈ ಇಬ್ಬರು ಅವರನ್ನು ನೇಮಿಸಿದವರು! ಹಾಗೆಯೇ ಈ ಪಕ್ಷದ ಲೋಕಸಭೆಯ, ವಿಧಾನಸಭೆಗಳ ಸದಸ್ಯರು ತಮ್ಮ ಮತದಾರರಿಗೆ ಜವಾಬ್ದಾರರಲ್ಲ, ಮಂತ್ರಿಗಳು ಮುಖ್ಯಮಂತ್ರಿಗಳು ಸಂಸತ್ತಿಗೆ ಜವಾಬ್ದಾರರಲ್ಲ, ಬದಲು ಇಂದಿರಾಗಾಂಧಿ-ರಾಜೀವಗಾಂಧಿಗೆ ಚಿರಋಣಿಗಳು!

ಇಂತಹ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ, ವ್ಯಕ್ತಿಮೂಲ ಹಾಗೂ ಅನುವಂಶಿಕ ಅಧಿಕಾರ ಮೂಲಗಳ ವಿರುದ್ಧ, ಪ್ರಜಾಪ್ರಭುತ್ವದ ಹಾಗೂ ನಾಗರೀಕ ಹಕ್ಕುಗಳ ವಿನಾಶದ ವಿರುದ್ಧ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಪ್ರತಿಭಟಿಸಬೇಕು. ಪ. ಬಂಗಾಳ, ಅಸ್ಸಾಂ, ಕೇರಳ, ಮೊದಲಾದ ರಾಜ್ಯಗಳಲ್ಲಿ ಕೂಡಲೇ ಚುನಾವಣೆ ನಡೆಸುವಂತೆ ಒಗ್ಗಟ್ಟಿನಿಂದ ಒತ್ತಾಯಿಸಬೇಕು.

○

ಕೃಷಿಕಾರ್ಮಿಕರ ಸಮ್ಮೇಳನ

24-1-82ರಂದು ಬೆಂಗಳೂರಿನಲ್ಲಿ ಬೆಂಗಳೂರು, ತುಮಕೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಯ ಕೃಷಿಕಾರ್ಮಿಕರ ಮತ್ತು ರೈತ ಸಂಘದ ಕಾರ್ಯಕರ್ತರ ವಿಸ್ತೃತ ಸಭೆ ಪ್ರಾಂತ ರೈತಸಂಘದ ಉಪಾಧ್ಯಕ್ಷ ಕಾಂ. ಎಚ್. ಸಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಮೇಲ್ಕಾಣಿಸಿದ ಪ್ರದೇಶಗಳಿಗೆ ಸೇರಿದ ಕೃಷಿಕಾರ್ಮಿಕರ ಸಮ್ಮೇಳನವನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯಲ್ಲಿ ನಡೆಸಲು ಈ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಯೋಜಿತ ಸಮ್ಮೇಳನಕ್ಕೆ 15 ಜನರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು ಸ್ವಾಗತಸಮಿತಿ ಅಧ್ಯಕ್ಷರಾಗಿ ಕಾಂ. ಜಿ. ಸಿ. ಗಂಗಯ್ಯ ಮತ್ತು ಕಾರ್ಯದರ್ಶಿಯಾಗಿ ಕಾಂ. ಪಿ. ಜಗನ್ನಾಥ ಆಯ್ಕೆಯಾಗಿದ್ದಾರೆ.

ಈ ಸಮ್ಮೇಳನದಲ್ಲಿ ಸುಮಾರು 200 ಜನ ಪ್ರತಿನಿಧಿಗಳು ಭಾಗವಹಿಸಲಿದ್ದು ಸ್ಥಳ ಮತ್ತು ದಿನಾಂಕವನ್ನು ನಂತರ ಪ್ರಕಟಿಸಲಾಗುವುದು.

ಸಾಮ್ರಾಜ್ಯಶಾಹಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಯುದ್ಧಖೋರ ನೀತಿ

(4ನೇ ಪುಟದಿಂದ)

ಸ್ಥಳ	ಈಗ ಹಾಲಿ ಇರುವ ಪಡೆ	1980ರಲ್ಲಿ ಹೆಚ್ಚಿಸಿದ ಸಂಖ್ಯೆ
I ಯೂರೋಪ್		
ಪಶ್ಚಿಮ ಜರ್ಮನಿ	244300	+5100
ಬ್ರಿಟನ್	24300	+1300
ಇಟಲಿ	11900	+200
ಸ್ಪೇನ್	9000	+300
ಟರ್ಕಿ	5300	+400
ಗ್ರೀಸ್	4400	+1100
ಐಸ್‌ಲ್ಯಾಂಡ್	2900	ಇಲ್ಲ
ನೆದರ್‌ಲ್ಯಾಂಡ್	2600	+400
ಬೆಲ್ಜಿಯಂ	2100	+100
ಪೋರ್ಚುಗಲ್	1400	ಇಲ್ಲ
ಬೇರೆದೇಶಗಳು	1200	+400
ಆರನೇ ನೌಕಾಪಡೆ	22300	—2700
ಒಟ್ಟು	331700	6600
II ಫೆಸಿಫಿಕ್ ಮತ್ತು ದೂರ ಪ್ರಾಚ್ಯ (PACIFIC AND FAR EAST)		
ಜಪಾನ್ ಮತ್ತು ಓಕಿನಾವ್	46000	—200
ದಕ್ಷಿಣ ಕೊರಿಯಾ	38000	—200
ಫಿಲಿಫೈನ್ಸ್	13400	—700
ಗ್ವಾಮ್ (GUAM)	9100	+300
ಆಸ್ಟ್ರೇಲಿಯಾ	600	ಇಲ್ಲ
ಮಿಡ್‌ವೇ	500	ಇಲ್ಲ
ಬೇರೆ ದೇಶಗಳು	500	+200
ಏಳನೇ ನೌಕಾಪಡೆ	15000	—6400
ಒಟ್ಟು	124400	—7000
III ಲ್ಯಾಟಿನ್ ಅಮೇರಿಕಾ		
ಪನಾಮಾ	9000	—300
ಪ್ಯೂಟೋರಿಕೋ	3700	+200
ಗ್ವಾಂಟನಾಮೊ	2200	ಇಲ್ಲ
ಒಟ್ಟು	14900	—100
IV ಬೇರೆ ವಿಭಾಗಗಳು		
ಆವರ್ಮುಡಾ	1400	+100
ಡಿಯಾಗೋ-ಗಾರ್ಸಿಯಾ	1400	+300
ಈಜಿಪ್ಟ	500	+400
ಕೆನಡಾ	700	ಇಲ್ಲ
ಸೌದಿ ಅರೇಬಿಯಾ	800	+300
ಬೇರೆ ಪ್ರದೇಶಗಳು	5300	+3500
ಸಾಗರದಲ್ಲಿರುವ ನೌಕಾಪಡೆಗಳು	21500	+18000
ಒಟ್ಟು	31600	+22600

ಈಗ ವಿಶ್ವದ ವಿವಿಧ ಭಾಗಗಳಲ್ಲಿ ನೆಲೆಗೊಳಿಸಿದ ಸೈನಿಕ ಪಡೆಗಳ ಒಟ್ಟು ಸಂಖ್ಯೆ 502600. 1980 ಹೆಚ್ಚಿಸಿದ ಒಟ್ಟು ಸಂಖ್ಯೆ 22100.

ಈ ಅಮೇರಿಕದ ಅಧಿಪತಿ ರೇಗನ್ ಪೋಲೆಂಡಿನಲ್ಲಿ ಮಾನವೀಯ ಹಕ್ಕುಗಳ ಚ್ಯುತಿಯಾಗುತ್ತಿದೆ ಎಂದು ಬೊಬ್ಬೆಹಾಕುತ್ತಿರುವುದು ಎಂಥಹ ವಿಪರ್ಯಾಸ!

(ಸಂಗ್ರಹ)

"ಪಕ್ಷದ ಯಶಸ್ವಿ ಹನ್ನೊಂದನೆ ಅಧಿವೇಶನ"

(1ನೇ ಪುಟದಿಂದ)

ಯುತ್ತಿರುವುದರ ಲಕ್ಷಣವೆಂದು ಹೇಳಿದರು. ವೀರ ತೆಲಂಗಾಣ ಹೋರಾಟದ ಸ್ಫೂರ್ತಿ ಮತ್ತೆ ಮರುಕಳಿಸುತ್ತಿದೆ ಎಂದ ಮುಂದಾಳುಗಳೆಲ್ಲರೂ ಪಕ್ಷದ ಆಂಧ್ರಪ್ರದೇಶದ ಘಟಕವನ್ನು ಅಭಿನಂದಿಸಿದರು.

ತಾರೀಖು 26ರಂದು ಬೆಳಿಗ್ಗೆ ಪ್ರಾರಂಭವಾಗಬೇಕಾಗಿದ್ದ ಅಧಿವೇಶನವು ಪಕ್ಷದ ಕೇಂದ್ರಸಮಿತಿಯ ಸದಸ್ಯ ಹಾಗೂ ಡೆಲ್ಲಿ ರಾಜ್ಯಸಮಿತಿಯ ಕಾರ್ಯದರ್ಶಿಗಳಾದ ಕಾಂ. ಜಯಪಾಲ್‌ಸಿಂಗ್ ಅವರ ಆಕಸ್ಮಿಕ ನಿಧನದಿಂದಲಾಗಿ ಸಂಜೆ ಪ್ರಾರಂಭವಾಯಿತು. 26ರಂದು ಬೆಳಿಗ್ಗೆ ದಿವಂಗತ ಕಾಂ. ಜಯಪಾಲ್‌ಸಿಂಗ್ ಅವರ ಪಾರ್ಥಿವ ಶರೀರವನ್ನು ಪ್ರತಿನಿಧಿಗಳೂ ಸೇರಿದಂತೆ ಸಹಸ್ರಾರು ಮಂದಿಯುಂದೊಡಗೂಡಿದ ಮೆರವಣಿಗೆಯಲ್ಲಿ ಕೊಂಡೊಯ್ದು ದಹನ ಮಾಡಲಾಯಿತು. ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಮತ್ತು ಕೊನೆಯ ಗೌರವಗಳನ್ನು ಸಲ್ಲಿಸಲಾಯಿತು.

26ರಂದು ಸಂಜೆ ಪ್ರಾರಂಭವಾದ ಪಕ್ಷದ ಹನ್ನೊಂದನೆ ಅಧಿವೇಶನವು 30ರಂದು ಸಂಜೆಯ ತನಕ ಜರುಗಿತು. ಕೇಂದ್ರಸಮಿತಿಯು ಅಧಿವೇಶನದ ಮುಂದಿಡಲು ತಯಾರಿಸಿದ್ದ ಕರಡು ರಾಜಕೀಯ ಗೊತ್ತುವಳಿ ಮತ್ತು ಕರಡು ರಾಜಕೀಯ-ಸಂಘಟನಾ ವರದಿಗಳನ್ನು ಕಾಂ. ಬಿ. ಟಿ. ರಣದಿವೆ ಮತ್ತು ಕಾಂ. ಇ. ಎಮ್. ಎಸ್. ನಂಬೂದಿರಿಪಾದರು ಸಭೆಯಲ್ಲಿ ಮಂಡಿಸಿದ್ದರು. ಇವೆರಡರ ಮೇಲೂ ಸಾಕಷ್ಟು ಗಂಭೀರ ಚರ್ಚೆ ನಡೆಯಿತು. ಕರಡು ರಾಜಕೀಯ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಪ್ರತಿನಿಧಿಗಳು ಕೊಟ್ಟಿರುವ ಸಲಹೆಗಳನ್ನೂ, ಬಿಟ್ಟುಹೋಗಿರುವ ಅಂಶಗಳನ್ನೂ ಸೇರಿಸಿ ಕರಡು ರಾಜಕೀಯ ಸಂಘಟನಾ ವರದಿಯನ್ನು ಉತ್ತಮಪಡಿಸಲು ಹೊಸತಾಗಿ ಆಯ್ಕೆಯಾಗಲಿರುವ ಕೇಂದ್ರಸಮಿತಿಗೆ ಅಧಿಕಾರವನ್ನೂ ಸರ್ವಾನುಮತದಿಂದ ಕೊಡಲಾಯಿತು. ಕರಡು ರಾಜಕೀಯ ಗೊತ್ತುವಳಿ ಮತ್ತು ಕರಡು ರಾಜಕೀಯ ಸಂಘಟನಾ ವರದಿಗಳ ಮೇಲೆ ಬಂದಿರುವ ಚರ್ಚೆಗಳಿಗೆ ಉತ್ತರವನ್ನು ಕೇಂದ್ರಸಮಿತಿಯ ಪರವಾಗಿ ಕಾಂ. ಬಿ. ಟಿ. ರಣದಿವೆ ಮತ್ತು ಕಾಂ. ಇ. ಎಮ್. ಎಸ್. ಕೊಟ್ಟಿದ್ದರು.

ಯುದ್ಧದ ಅಪಾಯದ ವಿರುದ್ಧ, ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆಸುವ ಬಗ್ಗೆ, ಅಸ್ಸಾಮಿನ ಪರಿಸ್ಥಿತಿ ಬಗ್ಗೆ, ಕೇರಳದ ರಾಜಕೀಯ ಪರಿಸ್ಥಿತಿ ಬಗ್ಗೆ ಮತ್ತು ಅಲ್ಲಿ ಕೂಡಲೇ ಚುನಾವಣೆ ನಡೆಯುವಂತೆ, ತ್ರಿಪುರಾದಲ್ಲಿನ ಪರಿಸ್ಥಿತಿ ಬಗ್ಗೆ, ದಲಿತರ ಮೇಲಿನ ಹಲ್ಲೆ ಮತ್ತು ದಬ್ಬಾಳಿಕೆ ವಿರುದ್ಧ, ಜನವರಿ 19ರ ಸಾರ್ವತ್ರಿಕ ಮುಷ್ಕರದ ಕುರಿತು – ಹೀಗೆ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. (ನಿರ್ಣಯಗಳನ್ನು ವಿವರವಾಗಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.) ಅಧಿವೇಶನದ ಕೊನೆಗೆ ನಲುವತ್ತೈದು ಸದಸ್ಯರ ಕೇಂದ್ರಸಮಿತಿಯನ್ನು ರಚಿಸಲು ನಿರ್ಣಯಿಸಿ, ನಲುವತ್ತೆರಡು ಮಂದಿಯನ್ನು ಆಯ್ಕೆ ಮಾಡಲಾಯಿತು. ಉಳಿದ ಮೂರು ಸ್ಥಾನಗಳನ್ನು ತುಂಬಲು ಕೇಂದ್ರ ಸಮಿತಿಗೆ ಅಧಿಕಾರ ನೀಡಲಾಯಿತು. ಹಿಂದಿನ ಕೇಂದ್ರಸಮಿತಿ ಸದಸ್ಯರಲ್ಲದೆ ಇನ್ನೂ ಈರ್ವರನ್ನು ಹೊಸತಾಗಿ ತೆಗೆದುಕೊಳ್ಳಲಾಯಿತು.

ಹೊಸತಾಗಿ ಆಯ್ಕೆಯಾದ ಕೇಂದ್ರ ಸಮಿತಿಯು ಸೇರಿ ಕಾಂ. ಇ. ಎಮ್. ಎಸ್. ನಂಬೂದಿರಿಪಾದರನ್ನು ಮತ್ತೆ ಪ್ರಧಾನಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಚುನಾಯಿಸಿತು. ಕಾಂ. ಇ. ಎಮ್. ಎಸ್. ಅವರೂ ಸೇರಿದಂತೆ ಒಂಭತ್ತು ಸದಸ್ಯರ ಪೊಲಿಟ್‌ಬ್ಯೂರೋವನ್ನೂ ಆಯ್ಕೆಮಾಡಲಾಯಿತು. ಕಾಂ. ಬಿ. ಟಿ. ರಣದಿವೆ, ಕಾಂ. ಎಮ್. ಬಸವಪುನ್ನಯ್ಯ, ಕಾಂ. ಪ್ರಮೋದ್ ದಾಸ್‌ಗುಪ್ತಾ, ಕಾಂ. ಜ್ಯೋತಿಬಸು, ಕಾಂ. ಸಮರ ಮುಖರ್ಜಿ, ಕಾಂ. ಇ. ಬಾಲಾನಂದನ್, ಕಾಂ. ಹೆಚ್. ಎಸ್. ಸುರ್ಜಿತ್, ಕಾಂ. ಪಿ. ರಾಮಮೂರ್ತಿ ಇವರುಗಳು ಪೊಲಿಟ್‌ಬ್ಯೂರೋದ ಉಳಿದ ಸದಸ್ಯರುಗಳು.

ಪಕ್ಷದ ಆಂಧ್ರಪ್ರದೇಶ ರಾಜ್ಯಸಮಿತಿಯು ಕಾಂ. ಪಿ. ಸುಂದರಯ್ಯ ಅವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯಾಗಿ ಕೆಲಸ ಮಾಡಿತ್ತು. ಕಾಂ. ಮೋಟೂರು ಹನುಮಂತರಾವ್ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಊಟ ತಿಂಡಿ ಮತ್ತು ತಂಗುವ ಸ್ಥಳದ ವ್ಯವಸ್ಥೆಯಿಂದ ಮೊದಲ್ಗೊಂಡು ಎಲ್ಲವೂ ಅತ್ಯಂತ ಉತ್ತಮ ರೀತಿಯಲ್ಲೂ, ಶಿಸ್ತುಬದ್ಧವಾಗಿಯೂ ಸಂಘಟಿಸಲ್ಪಟ್ಟಿತ್ತು. ಮುನ್ನೂರು ಮಂದಿ ಸ್ವಯಂ ಸೇವಕರು ಮತ್ತು ಮೂವತ್ತು ಮಂದಿ ಸ್ವಯಂ ಸೇವಕಿಯರು ಪ್ರತಿನಿಧಿಗಳನ್ನು ನೋಡಿಕೊಳ್ಳುವ ಮತ್ತು ಅಧಿವೇಶನದ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದರು. ನಯ, ವಿನಯ, ಕ್ರಾಂತಿಕಾರಿ ಶಿಸ್ತು ಮತ್ತು ಸಂಗಾತಿಗಳ ಬಗೆಗಿನ ಕಾಳಜಿಗಳಿಂದ ಕೂಡಿದ್ದ ಸ್ವಯಂ ಸೇವಕರು ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದರಲ್ಲಿ ಆಶ್ಚರ್ಯವಿಲ್ಲ. ವಿದ್ಯಾವಂತ ಯುವಜನರಿಂದ ಕೂಡಿದ್ದ ಸ್ವಯಂ ಸೇವಕ-ಸೇವಕಿಯರಲ್ಲಿ ವೈದ್ಯಕೀಯ, ತಾಂತ್ರಿಕ ಮತ್ತು ಕಾನೂನು ವಿದ್ಯಾಭ್ಯಾಸ ಮಾಡುವವರು ದೊಡ್ಡ ಸಂಖ್ಯೆಯಲ್ಲಿದ್ದರು. ಎಲ್ಲರ ಮೆಚ್ಚುಗೆ ಮತ್ತು ಆತ್ಮೀಯತೆ ಗಳಿಸಿಕೊಂಡಿದ್ದ ಅವರೆಲ್ಲರನ್ನು ಬಿಟ್ಟು ವಿಜಯವಾಡದಿಂದ ವಾಪಾಸು ಹೊರಡುವಾಗ ಪ್ರತಿನಿಧಿಗಳೆಲ್ಲರ ಮನಸ್ಸು ಭಾರವಾಗಿತ್ತು.

(ಅಧಿವೇಶನದಲ್ಲಿ ತೆಗೆದುಕೊಂಡ ರಾಜಕೀಯ ನಿರ್ಣಯಕ್ಕೆ ಮತ್ತು ಸಂಘಟನಾ ವಿಚಾರಗಳಿಗೆ ಸಂಬಂಧಿಸಿದ ಲೇಖನವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು)

●

ಅಂಚೆ-ತಂತಿ ದರ ಏರಿಕೆ ಆಘಾತಕರ

ಟೆಲಿಫೋನ್, ಅಂಚೆ ಮತ್ತು ತಂತಿ ದರಗಳ ದಿಢೀರ್ ಏರಿಕೆ ಆಘಾತಕರ ಎಂದು ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ಪರವಾಗಿ ಕಾಂ. ಎಂ. ಕೆ. ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಸಂಸತ್ ಅಧಿವೇಶನ ಸೇರುವ ಮುನ್ನ ಸರಕಾರ ಈ ದರ ಹೆಚ್ಚಿಸಿರುವುದನ್ನು ಪ್ರಕಟಿಸಿರುವುದು ಸಂಸತ್‌ಗೆ ಅಪಮಾನ ಮಾಡಿದಂತೆ ಎಂದು ಕಾಂ. ಎಂ. ಕೆ. ತಿಳಿಸಿದ್ದಾರೆ.

"ಈಗಾಗಲೇ ತಾಂಡವವಾಡುತ್ತಿರುವ ಹಣದುಬ್ಬರ ಪರಿಸ್ಥಿತಿ ಈ ದರ ಹೆಚ್ಚಳದಿಂದಾಗಿ ಇನ್ನಷ್ಟು ಕೆಟ್ಟದಾಗಲಿದೆ. ಸರಕಾರ ಏಕಾಏಕಿಯಾಗಿ ಈ ನಿರ್ಧಾರ ಕೈಗೊಂಡಿದ್ದು ಅನ್ಯಾಯದ ಪರಮಾವಧಿ".

"ಐ.ಎಂ.ಎಫ್. ಸಾಲದ ಷರತ್ತುಗಳು, ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯು ಜನವಿರೋಧಿ ಕ್ರಮಗಳನ್ನು ಜನತೆಯ ಮೇಲೆ ಹೇರಲು ಸರಕಾರದ ಮೇಲೆ ಒತ್ತಡ ತರುತ್ತಿವೆ ಎಂಬುದು ಇದರಿಂದ ಸ್ಪಷ್ಟ".

ಸರಕಾರದ ಈ ಜನವಿರೋಧಿ ಕ್ರಮಗಳ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ತಮ್ಮ ಧ್ವನಿ ಎತ್ತಬೇಕೆಂದು ಕಾಂ. ಎಂ. ಕೆ. ಮನವಿ ಮಾಡಿದ್ದಾರೆ.

○

ಕನಿಷ್ಟ ಕೂಲಿ ಹೆಚ್ಚಿಸಲು ಒತ್ತಾಯಿಸಿ

ಧರಣಿ ಸತ್ಯಾಗ್ರಹ

ಕನಿಷ್ಟ ಕೂಲಿ ಹೆಚ್ಚಿಸಬೇಕೆಂದು ಸರಕಾರವನ್ನು ಒತ್ತಾಯಿಸಿ ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ನೇತೃತ್ವದಲ್ಲಿ 15-2-82ರಂದು ವಿಧಾನ ಸೌಧದೆದುರು ಧರಣಿ ಸತ್ಯಾಗ್ರಹ ನಡೆಯಲಿದೆ.

ಸಂಪಾದಕೀಯ

(1ನೇ ಪುಟದಿಂದ)

ಸರಕಾರಕ್ಕೂ 70 ಮತಗಳ ಬೆಂಬಲ ದೊರೆಯಿತು. ಆಳುವ ರಂಗದ ಕೂಟದ ಪಕ್ಷದವರೇ ಆಗಿರುವ ಸಭಾಧ್ಯಕ್ಷರು ತಮ್ಮ ಮತವನ್ನು ಆಡಳಿತ ರಂಗದ ಪರವಾಗಿ ಚಲಾಯಿಸುವುದರೊಂದಿಗೆ ಕರುಣಾಕರನ್ ಸರಕಾರವು ತಾತ್ಕಾಲಿಕವಾಗಿ ಬಚಾವಾಗಿದೆ. ಜನತಾಪಕ್ಷದ ಮೂವರು ಶಾಸಕರು ಕೇಂದ್ರ ನಾಯಕತ್ವದ ನಿಲುವಿಗೆ ವಿರುದ್ಧವಾಗಿ ಕರುಣಾಕರನ್ ಸರಕಾರಕ್ಕೆ ಬೆಂಬಲವಿತ್ತಿರುವುದು ಮತ್ತು ಸ್ವತಂತ್ರ ಶಾಸಕ ಕೆ. ಕೆ. ನಾಯರ್ ಅವರೂ ಸರಕಾರದ ಪರವಾಗಿ ಮತವಿತ್ತುದು ಕಾನೂನುಬಾಹಿರವಾಗಿ ಹುಟ್ಟಿಕೊಂಡ ಕರುಣಾಕರನ್ ಸರಕಾರವನ್ನು ಉಳಿಸುವುದಕ್ಕೆ ಸಹಾಯ ಮಾಡಿವೆ.

ಕೇರಳದ ಈ ಎಲ್ಲಾ ವಿದ್ಯಮಾನಗಳ ಹಿಂದಿರುವ ಒಂದು ಉತ್ತಮ ಬೆಳವಣಿಗೆ ಎಂದರೆ ಜನತಾಪಕ್ಷದ ರಾಷ್ಟ್ರೀಯ ಮುಖಂಡತ್ವವು ತೆಗೆದುಕೊಂಡಿರುವ ಸರ್ವಾಧಿಕಾರಿ ಕಾಂಗ್ರೆಸ್ (ಐ) ವಿರುದ್ಧದ ಸ್ಪಷ್ಟ ನಿಲುವು. ಇದರಿಂದಲಾಗಿ ಜನತಾಪಕ್ಷದ ಕೇರಳ ಘಟಕವು ಇಬ್ಭಾಗವಾಗಿದೆ. ಸ್ವಲ್ಪ ದಿನಗಳ ಹಿಂದೆ ಕಾಂಗ್ರೆಸ್ (ಎಸ್)ನ ಪರಿಸ್ಥಿತಿಯೂ ಹೀಗೆಯೇ ಆಗಿತ್ತು. ಜನತಾ ಪಕ್ಷ ಮತ್ತು ಕಾಂಗ್ರೆಸ್ (ಎಸ್) ಪಕ್ಷಗಳ ರಾಷ್ಟ್ರೀಯ ಮುಖಂಡತ್ವಗಳು ಸರ್ವಾಧಿಕಾರಿ ಕಾಂಗ್ರೆಸ್ (ಐ) ಪಕ್ಷದ ವಿರುದ್ಧ ತೆಗೆದುಕೊಂಡಿರುವ ಸ್ಪಷ್ಟವಾದ ನಿಲುವಿಗೆ ಅವರನ್ನು ಅಭಿನಂದಿಸಲೇಬೇಕು. ರಾಷ್ಟ್ರೀಯ ಮುಖಂಡತ್ವಗಳು ತೆಗೆದುಕೊಂಡ ನಿಲುವುಗಳನ್ನು ಒಪ್ಪಿಕೊಂಡು ಕರುಣಾಕರನ್ ಸರಕಾರವನ್ನು ವಿರೋಧಿಸಲು ಮುಂದಾದ ಈ ಎರಡು ಪಕ್ಷಗಳ ಕೇರಳದಲ್ಲಿನ ಶಾಸಕರು ಮತ್ತು ಬೆಂಬಲಿಗರನ್ನೂ ಅಭಿನಂದಿಸಬೇಕು. ಇವರ ಈ ನಿಲುವುಗಳು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಅನ್ನು ಜಂಟಿಯಾಗಿ ಎದುರಿಸುವುದಕ್ಕೆ ಸಹಾಯವಾಗುತ್ತದೆ. ಕೇರಳದಲ್ಲಿ ಸರ್ವಾಧಿಕಾರಿ ವಿರೋಧಿ ಶಕ್ತಿಗಳ ಒಗ್ಗಟ್ಟು ಇನ್ನೂ ಬಲಗೊಳ್ಳುವುದಕ್ಕೆ ಸಹಾಯವಾಗುತ್ತದೆ. ರಾಷ್ಟ್ರಮಟ್ಟದಲ್ಲೂ ಇದರ ಪರಿಣಾಮ ಆಗಿಯೇ ತೀರುವುದು ಖಂಡಿತ.

ಸಧ್ಯ ಅವಿಶ್ವಾಸ ನಿರ್ಣಯದಿಂದ ಕರುಣಾಕರನ್ ಸರಕಾರವು ಪಾರಾಗಿದೆ ಎಂಬುದು ನಿಜ. ಆದರೆ ಮುಂದೆ ಪ್ರತಿಯೊಂದು ಸಂದರ್ಭದಲ್ಲೂ ಸಭಾಧ್ಯಕ್ಷರ ಮತದ ಬೆಂಬಲದಿಂದ ಮಾತ್ರ ಸರಕಾರವು ನಿರ್ಣಯಗಳನ್ನು ತೆಗೆದುಕೊಳ್ಳುವುದೂ, ಉಳಿಯುವುದೂ ಸಾಧ್ಯ. ಇದು ಪ್ರಜಾಪ್ರಭುತ್ವ ನಿಯಮ ಮತ್ತು ಸಂಪ್ರದಾಯಕ್ಕೆ ವಿರುದ್ಧ. ಸಭಾಧ್ಯಕ್ಷರು ಸದಾ ಪಕ್ಷಪಾತಿಯಾಗಿಯೇ ಇದ್ದರೆ ಈ ಸ್ಥಾನದ ಉದ್ದೇಶವೇ ತಲೆಕೆಳಗಾಗುತ್ತದೆ! ಮಾತ್ರವಲ್ಲ ಇಂದಿನ ಸ್ಥಿತಿಯಲ್ಲಿ ಕರುಣಾಕರನ್ ಸರಕಾರ ಮುಂದೆ ಹೋಗುವುದೇ ಕಷ್ಟಸಾಧ್ಯ.

ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಸಮಬಲವಿರುವಾಗ ಮೊದಲ ಬಾರಿಗೆ ಸಭಾಧ್ಯಕ್ಷರು ಮತ ಚಲಾಯಿಸಿ ಸರಕಾರವನ್ನು ಉಳಿಸಿದ್ದರ ಸಂವಿಧಾನಾತ್ಮಕ ಔಚಿತ್ಯದ ಬಗ್ಗೆ ಪ್ರಶ್ನೆಗಳು ಎದ್ದಿವೆ. ಒಂದೆಡೆ ಹೋರಾಟವನ್ನು ನ್ಯಾಯಾಲಯಕ್ಕೆ ಒಯ್ಯುವ ಕಾರ್ಯವೂ ನಡೆದಿದೆ. ಇನ್ನೊಂದೆಡೆ ವಿಧಾನಸಭೆಯೊಳಗೂ ಹೋರಾಟವನ್ನು ಬಲಗೊಳಿಸಲು ವಿರೋಧ ಪಕ್ಷಗಳು ಮುಂದಾಗಿವೆ. ಸಭಾಧ್ಯಕ್ಷರ ಮೇಲೆ ಈಗಾಗಲೇ ಅವಿಶ್ವಾಸ ನಿರ್ಣಯವನ್ನು ಸಿ.ಪಿ.ಐ.(ಎಂ) ಮತ್ತು ಎಡ ಪ್ರಜಾಪ್ರಭುತ್ವರಂಗದ ಇತರ ಪಕ್ಷಗಳು ಮಂಡಿಸಿವೆ. ಆಳುವ ರಂಗ ಮತ್ತು ವಿರೋಧ ಪಕ್ಷಗಳಿಗೆ (ಸಭಾಧ್ಯಕ್ಷರನ್ನು ಬಿಟ್ಟು) ಸಮಬಲವಿರುವಾಗ ಸಭಾಧ್ಯಕ್ಷರ ಮೇಲಿರುವ ಅವಿಶ್ವಾಸ ನಿರ್ಣಯದ ಮೇಲೆ ಸಭಾಧ್ಯಕ್ಷರದ್ದೂ ಮತವಿಲ್ಲದೆ ಸ್ಪಷ್ಟ ತೀರ್ಮಾನ ಮಾಡುವುದು ಅಸಾಧ್ಯ! ನ್ಯಾಯಾಲಯ ಮತ್ತು ಸದನದೊಳಗಷ್ಟೇ ಅಲ್ಲದೆ ಕೇರಳ ರಾಜ್ಯದಾದ್ಯಂತ ಕಾನೂನುಬಾಹಿರ ಸರಕಾರದ ವಿರುದ್ಧ ಪ್ರಜಾಪ್ರಭುತ್ವ ಚಳುವಳಿಯೂ ಬೆಳೆಯುತ್ತಿದೆ. ಅಧಿಕಾರಕ್ಕೆ ಅಂಟಿಕೊಳ್ಳುವ ಬದಲು ಕೂಡಲೇ ಚುನಾವಣೆಯನ್ನು ನಡೆಸಿ ಜನತೆಯ ತೀರ್ಪನ್ನು ಪಡೆಯುವುದೇ ಸರಿಯಾದ ಮಾರ್ಗ.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT